**ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರ ಅಧ್ಯಕ್ಷತೆಯಲ್ಲಿ ದಿನಾಂಕ 30-10-2014ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :**

*******

**ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.**

*********

ಸಭೆಯ ಆರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ)ಯವರು, ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ವಿಧಾನಸಭಾ ಸದಸ್ಯರು, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು, ಹಾಗೂ ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ವಿನಂತಿಸಿದರು.

ಮೊದಲಿಗೆ ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಶ್ರೀಮತಿ ನಾಗಮ್ಮ, ಮಾನ್ಯ ಸದಸ್ಯರು, ಕಡಬ ಜಿ.ಪಂ.ಕ್ಷೇತ್ರ, ಗುಬ್ಬಿ ತಾಲ್ಲೂಕು ಇವರು ಅನುಸೂಚಿತ ಜಾತಿಗೆ ಸೇರಿದವರಾಗಿದ್ದು, ಇವರಿಗೆ ಯಾರೂ ಬೆಲೆ ಕೊಡುವುದಿಲ್ಲ; ಸಹಾಯಕ ಕಾರ್ಯ ಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಗುಬ್ಬಿ ಇವರು ಅನುಚಿತವಾಗಿ ನಡೆಸಿಕೊಂಡಿರುತ್ತಾರೆ ಎಂದು ಆರೋಪಿಸಿದರು. ಈ ಆರೋಪಕ್ಕೆ ಸಭೆಯಲ್ಲಿ ಉಪಸ್ಥಿತರಿದ್ದ ಅನೇಕ ಮಂದಿ ಮಾನ್ಯ ಸದಸ್ಯರುಗಳು ಬೆಂಬಲ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ನಾಗಮ್ಮನವರು, ಕುಡಿಯುವ ನೀರು ಯೋಜನೆಯ ಅನುದಾನದ ಮಾಹಿತಿ ಪಡೆಯಲು ತಮ್ಮ ಪತಿಯವರೊಂದಿಗೆ ಗುಬ್ಬಿ ಪಂ.ರಾ.ಇಂ.ಉಪವಿಭಾಗ ಕಛೇರಿಗೆ ಹೋದಾಗ ಅಲ್ಲಿನ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ರವರು ಸೌಜನ್ಯ ತೋರದೆ ನನ್ನನ್ನು ಅವಹೇಳನ ಮಾಡಿರುವುದಾಗಿ ಸಭೆಯ ಗಮನಕ್ಕೆ ತಂದರು.

ಬಹುತೇಕ ಮಾನ್ಯ ಸದಸ್ಯರುಗಳು ಸದರಿ ಅಧಿಕಾರಿಯ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ಮಹಲಿಂಗಯ್ಯನವರು, ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡದಿದ್ದ ಮೇಲೆ ಅಂತಹ ಅಧಿಕಾರಿ / ಆಡಳಿತ ಏಕೆ ಬೇಕು? ಎಂದು ಆಕ್ಷೇಪಿಸಿ, ಈಗಲೇ ಸದರಿ ಅಧಿಕಾರಿಯನ್ನು ಕರೆಸಿ ಚುನಾಯಿತ ಪ್ರತಿನಿಧಿಗಳನ್ನು ಗೌರವದಿಂದ ನಡೆಸಿಕೊಳ್ಳುವಂತೆ ಸೂಚನೆ ನೀಡಿ ಎಂದು ಆಗ್ರಹಿಸಿದರು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಗುಬ್ಬಿ ಇವರು, ಮಾನ್ಯ ಸದಸ್ಯರಾದ ಶ್ರೀಮತಿ ನಾಗಮ್ಮನವರನ್ನು ತಾವು ಯಾವುದೇ ರೀತಿಯಲ್ಲೂ ಅವಹೇಳನ ಮಾಡಿಲ್ಲವೆಂದೂ ಹಾಗೂ ಅವರು ಕಛೇರಿಗೆ ಭೇಟಿ ನೀಡಿದಾಗ ಅವರನ್ನು ಸೌಜನ್ಯದಿಂದ ನಡೆಸಿಕೊಂಡಿರುವುದಾಗಿಯೂ ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಇಂತಹ ಅಧಿಕಾರಿಗಳ ಸೇವೆ ಜಿಲ್ಲಾ ಪಂಚಾಯತ್ ಗೆ ಅಗತ್ಯವಿಲ್ಲ; ಅವರನ್ನು ಸರ್ಕಾರಕ್ಕೆ ವಾಪಸ್ ಕಳುಹಿಸಲು ಈ ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮಾನ್ಯ ಅಧ್ಯಕ್ಷರು, ಇದು ಆಡಳಿತಾತ್ಮಕ ವಿಷಯವಾಗಿರುವುದರಿಂದ ಈ ವಿಷಯವನ್ನು ದೊಡ್ಡದು ಮಾಡುವುದು ಬೇಡ ಎಂದು ಸಮಾಧಾನಪಡಿಸಿದರು. ಅಧಿಕಾರಿಯು ಕ್ಷಮೆಯಾಚನೆ ಮಾಡಿದ ನಂತರ ವಿಷಯವನ್ನು ಮುಕ್ತಾಯಗೊಳಿಸಲಾಯಿತು.

ನಂತರ, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಗಳು ಆಯಾ ಕ್ಷೇತ್ರಗಳ ಜಿಲ್ಲಾ ಪಂಚಾಯತ್ ಸದಸ್ಯರ ಮುಖಾಂತರ ಅನುಮತಿ ಮೇಲೆ ಕ್ರಿಯಾ ಯೋಜನೆಗಳ ನಿರ್ವಹಣೆ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯನವರು, ಹೊನ್ನುಡಿಕೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯರು ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ; ದಿನಾಂಕ 02-10-2014 ರಂದು ರಜೆಯನ್ನು ಪಡೆಯದೆ ಕೆಲಸಕ್ಕೆ UÉÊgÀÄ ºÁdgÁVgÀÄvÁÛgÉ ; ಈ ವಿಷಯವನ್ನು ತಾಲ್ಲೂಕು ವೈದ್ಯಾಧಿಕಾರಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಗಮನಕ್ಕೆ ತಂದಿದ್ದಾಗ್ಯೂ ಯಾವುದೇ ಕ್ರಮವಹಿಸಿರುವುದಿಲ್ಲ; ಔಷಧಿ ಸರ್ಕಾರದಿಂದ ಸರಬರಾಜು ಆಗದೆ ವೈದ್ಯರು ಹೊರಗಡೆ ಮಳಿಗೆಯಿಂದ ಹಣ ಕೊಟ್ಟು ತಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಂದ ಹಣ ಪಡೆದು ಔಷಧಿಗಳನ್ನು ವಿತರಿಸುತ್ತಾರೆ; ಔಟ್ ಡೇಟೆಡ್ ಔಷಧಿಗಳು ಈ ಆರೋಗ್ಯ ಕೇಂದ್ರದಲ್ಲಿವೆ; ಈ ಬಗ್ಗೆ ಫೋಟೋ ದಾಖಲೆಯನ್ನು ಅಧಿಕಾರಿಗಳಿಗೆ ನೀಡಲಾಗಿದೆ; ಆದರೂ ಈ ವರೆಗೆ ಯಾವುದೇ ಕ್ರಮವಹಿಸಿರುವುದಿಲ್ಲ; ಆದುದರಿಂದ ಶೀಘ್ರದಲ್ಲಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಲು ತುರ್ತು ಅಗತ್ಯ ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಹೊನ್ನುಡಿಕೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ಮೂರು ದಿನಗಳ ಒಳಗಾಗಿ ವರದಿ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**( ಕ್ರಮ:-ಡಿ.ಹೆಚ್.ಒ.ತುಮಕೂರು )**

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಎಡೆಯೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಕೇಂದ್ರಸ್ಥಾನದಲ್ಲಿರುವಂತೆ ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣಾಧಿಕಾರಿಯವರ ಕಡೆಯಿಂದ ನಿರ್ದಿಷ್ಟ ಸೂಚನೆ ಕೊಡಿಸಬೇಕು ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ಸದರಿ ವೈದ್ಯರಿಗೆ ನೋಟೀಸ್ ನೀಡಿ ಅವರಿಂದ ವಿವರಣೆ ಪಡೆದು ಅವರು ಕೇಂದ್ರಸ್ಥಾನದಲ್ಲಿಯೇ ಉಳಿಯಲು ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ:-ಡಿ.ಹೆಚ್.ಒ.ತುಮಕೂರು )**

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಚಿ.ನಾ.ಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿಯಲ್ಲಿ ರೂ.30.00 ಲಕ್ಷ ಮೊತ್ತದ ಅವ್ಯವಹಾರವಾಗಿದೆ; ಮೂರು ಜನರ ಹೆಸರಿನಲ್ಲಿ ಹಣ ಸೆಳೆದಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ಈ ಬಗ್ಗೆ ಈಗಾಗಲೇ ಮಾಹಿತಿ ಬಂದು ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಎನ್.ಜಿ. ಮಂಜುಳ ರವರು, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯ ಮೆಟ್ರಿಕ್ ಪೂರ್ವ(ಹೈಸ್ಕೂಲ್) ವಿದ್ಯಾರ್ಥಿ ನಿಲಯವನ್ನು ಮುಚ್ಚಲಾಗಿದ್ದು, ಸದರಿ ಕಟ್ಟಡವನ್ನು ಕಾಲೇಜು ಹಾಸ್ಟೆಲ್ ಗೆ ಬಳಸಿಕೊಳ್ಳಲು ನೀಡುವಂತೆ ಕೋರಿದರು. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು, ವಿದ್ಯಾರ್ಥಿಗಳ ಸಂಖ್ಯಾಬಲ ಕಡಿಮೆ ಇದ್ದುದರಿಂದ ಸದರಿ ಹಾಸ್ಟೆಲ್ ನ್ನು ಮುಚ್ಚಲಾಗಿದೆ; ತಾವು ಮನವಿ ಸಲ್ಲಿಸಿದಲ್ಲಿ ಕಾಲೇಜು ಹಾಸ್ಟೆಲ್ ಗೆ ಬಳಸಿಕೊಳ್ಳಲು ಸದರಿ ಕಟ್ಟಡವನ್ನು ನೀಡಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಎನ್.ಸಿ.ಕಲಾ ರವರು, ದೇವಲಾಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರ (ಮಹಿಳೆ) ಮೇಲೆ ಕ್ರಿಮಿನಲ್ ಕೇಸ್ ದಾಖಲಾಗಿ, ಎಫ್.ಐ.ಆರ್. ಆಗಿರುವ ಕುರಿತು ಸಭೆಯ ಗಮನಕ್ಕೆ ತರುತ್ತಾ, ಸದರಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಬಿಲ್ ಕಲೆಕ್ಟರ್ ಮೇಲೆ ಏಕೆ ಕೇಸ್ ಬುಕ್ ಆಗಿಲ್ಲ, ಇದೇನು ರಾಜಕೀಯ ಒತ್ತಾಸೆಯೇ? ಎಂದು ಪ್ರಶ್ನಿಸಿದರು. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ತುಮಕೂರು ಇವರು, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ನಿರ್ದೇಶನದಂತೆ ಕ್ರಮವಹಿಸಲಾಗಿದೆ; ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸೇರಿ ಅವ್ಯವಹಾರ ಮಾಡಿದ್ದಾರೆ; ಆದರೆ ಆಗಿನ ಕಾರ್ಯದರ್ಶಿಯವರು ಕಳೆದ ಎರಡು ವರ್ಷಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಅವರ ವಿರುದ್ಧ ಕೇಸ್ ದಾಖಲಿಸಲು ಬರುವುದಿಲ್ಲ; ಆದುದರಿಂದ ಅವರಿಗೆ ಸರ್ಕಾರದಿಂದ ಬರಬೇಕಾದ ಆರ್ಥಿಕ ಸೌಲಭ್ಯಗಳನ್ನು ಕಡಿತಗೊಳಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ; ಅಧ್ಯಕ್ಷರ ವಿರುದ್ಧ ಕೇಸ್ ದಾಖಲಿಸಲಾಗಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಮಾನ್ಯ ಅಧ್ಯಕ್ಷರು, ಎಫ್.ಐ.ಆರ್.ಪ್ರತಿ ನೀಡಿದರೆ ಅನುಕೂಲವಾಗುತ್ತದೆ ಎಂದು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

**( ಕ್ರಮ: EO, ತುಮಕೂರು )**

ಮಾನ್ಯ ಸದಸ್ಯರಾದ ಶ್ರೀಮತಿ ವಸಂತಮ್ಮನವರು, ಹುಲಿಯೂರುದುರ್ಗ ಗ್ರಾಮ ಪಂಚಾಯಿತಿ ಅಧ್ಯಕ್ಷರು ತಮ್ಮ ಅಧಿಕಾರಾವಧಿ ಪೂರ್ಣಗೊಂಡು ಎರಡು ತಿಂಗಳು ಕಳೆದಿದ್ದರೂ ಡ್ಯಾಂಗಲ್ ನ್ನು ಪಂಚಾಯಿತಿಗೆ ಹಿಂದಿರುಗಿಸದೆ, ಸದರಿ ಡ್ಯಾಂಗಲ್ ಬಳಸಿ MGNREGA ಅಡಿ ರೂ.6.00 ಲಕ್ಷ ಹಣ ದುರುಪಯೋಗ ಮಾಡಿದ್ದರೆ; ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರನ್ನು ಕೇಳಿದರೆ, ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೇಳಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೇಳಿ ಎಂದು ಅಸಭ್ಯವಾಗಿ ನಡೆದುಕೊಳ್ಳುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿ, ಕುಣಿಗಲ್ ತಾಲ್ಲೂಕಿನ 23 ಗ್ರಾಮ ಪಂಚಾಯಿತಿಗಳಲ್ಲಿ ಈ ರೀತಿ ಆಗಿದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಾನಿರ್ವಾಹಕ ಅಧಿಕಾರಿ, ಕುಣಿಗಲ್ ಇವರು , ಈ ಕುರಿತು ಓಂಬಡ್ಸ್ ಮನ್ ರವರಿಂದ ತನಿಖೆ ನಡೆಸಿದ್ದು, ಯಾವುದೇ ಲೋಪವಾಗಿಲ್ಲವೆಂದು ತನಿಖಾ ವರದಿಯಲ್ಲಿ ತಿಳಿಸಲಾಗಿರುತ್ತದೆ; ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಂಡ ನಂತರ automatic ಆಗಿ ಡ್ಯಾಂಗಲ್ change ಆಗುತ್ತದೆ; ಹಣ ದುರುಪಯೋಗಕ್ಕೆ ಅವಕಾಶವೇ ಇಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು. ಮಾನ್ಯ ಅಧ್ಯಕ್ಷರು, ಪೂರಕ ದಾಖಲೆ ಒದಗಿಸಿ ಅರ್ಜಿ ನೀಡಿದರೆ, ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರ ಮೂಲಕ ತನಿಖೆಗೆ ಕ್ರಮವಹಿಸಿ ಆರೋಪ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**( ಕ್ರಮ:-ಉಪಕಾರ್ಯದರ್ಶಿ (ಅಭಿವೃದ್ಧಿ).ಜಿ ಪಂ,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಹರೀಶ್ ರವರ ವಿರುಧ್ಧದ ದೂರಿನನ್ವಯ ಫೋಟೋಗಳನ್ನು ಒದಗಿಸಲಾಗಿದೆ; ಜಿಲ್ಲಾ ಪಂಚಾಯತ್ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸರ್ಕಾರದಿಂದ ಮೊಬೈಲ್ ಫೋನ್ ಗಳನ್ನು ನೀಡಲಾಗಿದೆ; ಈ ಹಿಂದೆ ಸಾಕಷ್ಟು ಬಾರಿ ಎಚ್ಚರಿಕೆ ನೀಡಿದ್ದಾಗ್ಯೂ ಸಹ ಮೊಬೈಲ್ ದೂರವಾಣಿ ಕರೆಮಾಡಿದಾಗ ಸದರಿ ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಫೋನ್ ಎತ್ತುವುದಿಲ್ಲ, ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಮತ್ತು ಯಾರೇ ಸಾರ್ವಜನಿಕರು ಗ್ರಾಮ ಪಂಚಾಯಿತಿಗೆ ಹೋದರೆ ದೌರ್ಜನ್ಯದ ಆಡಳಿತ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಈ ಕುರಿತು ಅವರ ವಿರುದ್ಧ ಯಾವ ರೀತಿ ಕ್ರಮಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು; ಹಾಗೂ

ನೀರಿನ ಟ್ಯಾಂಕ್ ತೊಳೆಸಿ, ಬೋರ್ ವೆಲ್ ಶುಚಿಗೊಳಿಸಿ ಗ್ರಾಮಸ್ಥರಿಗೆ ಶುದ್ಧ ನೀರು ಒದಗಿಸಿದಲ್ಲಿ ರೋಗ ನಿವಾರಣೆಗೆ ಸಹಾಯಧನ ನೀಡುವ ಪ್ರಮೇಯವೇ ಬರುವುದಿಲ್ಲ ಎಂದು ಆಗ್ರಹಿಸಿ, ಸದರಿ ಗ್ರಾಮ ಪಂಚಾಯಿತಿಯ ನೀರಿನ ಸ್ಯಾಂಪಲ್ ನ್ನು ಸಭೆಗೆ ತೋರಿಸಿದರು.

ಮಾನ್ಯ ಅಧ್ಯಕ್ಷರು, ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಗೆ ಹಠಾತ್ ಭೇಟಿ ನೀಡಿ ಪರಿಶೀಲಿಸಿ ಆತನ ವಿರುದ್ಧ ನೀಡಲಾಗಿರುವ ವರದಿಯನ್ವಯ ಏನು ಕ್ರಮವಹಿಸಲಾಗಿದೆ? ಎಂದು ಪ್ರಶ್ನಿಸಿದರು. ಪ್ರತಿಯಾಗಿ ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ತುಮಕೂರು ಇವರು, ಸದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಒಂದು ತಿಂಗಳು ರಜೆ ಮೇಲೆ ಕಳುಹಿಸಲಾಗಿದ್ದು, ಅಲ್ಲಿನ ಕಾರ್ಯದರ್ಶಿಯವರೇ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ; ಅಲ್ಲಿನ ಸಮಸ್ಯೆ ಸರಿಹೋಗುವವರೆಗೆ ಅವರ ರಜೆ ಮುಂದುವರೆಸಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಮಾತಿಗೆ ಮಾನ್ಯ ಸದಸ್ಯರುಗಳಾದ ಶ್ರೀ ಟಿ.ಹೆಚ್.ಕೃಷ್ಣಪ್ಪ, ಶ್ರೀ ರಾಮಚಂದ್ರಯ್ಯ ಮತ್ತು ಡಾ: ರವಿಯವರುಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಹಾಗೂ ಗ್ರಾಮ ಪಂಚಾಯಿತಿಗಳ ಯಾವ ಪಿ.ಡಿ.ಓ. / ಕಾರ್ಯದರ್ಶಿಗಳ ವಿರುದ್ಧವೂ ಇದುವರೆಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲವಾದ್ದರಿಂದ ನಿಮ್ಮ ಅವಧಿಯಲ್ಲಾದರೂ ಸದರಿ ಪಿ.ಡಿ.ಓ.ವಿರುದ್ಧ ಶಿಸ್ತು ಕ್ರಮಕ್ಕೆ ಕ್ರಮವಹಿಸಿ, ಇದರಿಂದಲಾದರೂ ಆ ಗ್ರಾಮ ಪಂಚಾಯಿತಿ ಸರಿಹೋಗಲಿ ಎಂದು ಮಾನ್ಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು, ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ವಿರುದ್ಧ ಅನುಬಂಧ 1-4ನ್ನು ಜಾರಿಗೊಳಿಸಿ ಅಗತ್ಯ ಕ್ರಮವಹಿಸುವಂತೆ ಉಪಕಾರ್ಯದರ್ಶಿ(ಅಭಿವೃದ್ಧಿ) ಇವರಿಗೆ ತಿಳಿಸಿದರು. ಅಲ್ಲದೆ ಅವರ ಕರ್ತವ್ಯಲೋಪ ಹಾಗೂ ಬೇಜವಾಬ್ದಾರಿ ನಡವಳಿಕೆಯಿಂದ ಗ್ರಾಮ ಪಂಚಾಯಿತಿಯ ಕೆಲಸ ಕುಂಠಿತವಾಗಿರುವುದರಿಂದ ಆವರನ್ನು, ವಿಚಾರಣೆಯನ್ನು ಕಾಯ್ದಿರಿಸಿ ಸೇವೆಯಿಂದಅಮಾನತ್ತು ಪಡಿಸಿ ಆದೇಶ ಹೊರಡಿಸಲು ಸೂಚಿಸಿದರು.

**( ಕ್ರಮ:-ಉಪಕಾರ್ಯದರ್ಶಿ(ಅಭಿವೃದ್ಧಿ).ಜಿ ಪಂ,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು, ತುರುವೇಕೆರೆ ತಾಲ್ಲೂಕು ಸಾದರಹಳ್ಳಿ ಮತ್ತು ಮರಾಠಿಪಾಳ್ಯ ಗ್ರಾಮಗಳಲ್ಲಿ ಸಿಸ್ಟನ್ ಶುಚಿಗೊಳಿಸಿ ಬಹಳ ದಿನವಾಗಿದೆ; ಅಲ್ಲಿ ಬಹಳ ದೂರದಿಂದ ಮಹಿಳೆಯರು ನೀರು ತರುತ್ತಾರೆ; Auto off ವ್ಯವಸ್ಥೆಯನ್ನು ಸ್ಥಗಿತಗೊಳಿಸಬೇಕು; ಟ್ಯಾಂಕ್ ತೊಳೆಯದೇ ಇರುವುದರಿಂದ ಟ್ಯಾಂಕಿನ ನೀರಿನಲ್ಲಿ ಹುಳುಗಳು ಇವೆ; ಆದುದರಿಂದ ಅಧಿಕಾರಿಗಳಿಗೆ ಬಿಸಿಮುಟ್ಟಿಸಿ ಈ ಎಲ್ಲ ಸಮಸ್ಯೆಗಳನ್ನು ಸರಿಪಡಿಸಬೇಕು ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ಗ್ರಾಮ ಪಂಚಾಯಿತಿ ಅವ್ಯವಸ್ಥೆ, ಸಿಸ್ಟನ್ ಕೊಳಕು, ಸುತ್ತ-ಮುತ್ತಲ ಹೊಲಸು, ಸಿಸ್ಟನ್ ಬಳಿಯ ಹುಲ್ಲುಗಾವಲು, ಪ್ಯಾನೆಲ್ ಬೋರ್ಡ್ ಮತ್ತು ಸ್ವಿಚ್ ಎಲ್ಲವನ್ನೂ ನೋಡಿ ಎಂದು ಸಭೆಗೆ ಫೋಟೋ ತೋರಿಸಿದರು.

**( ಕ್ರಮ:-ಕಾ.ನಿ.ಆ.ತಾ.ಪಂ.ತುರುವೇಕೆರೆ ತಾಲ್ಲೂಕು )**

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ಮಹಲಿಂಗಪ್ಪನವರು, ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ರಜೆ ನೀಡುವ ಬದಲು ಸದರಿ ಗ್ರಾಮ ಪಂಚಾಯಿತಿಯ ಸಿಸ್ಟನ್ ಕ್ಲೀನ್ ಮಾಡಿಸಲು ಅವರಿಗೆ ಸೂಚನೆ ನೀಡಬೇಕಾಗಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಈ ಸಮಸ್ಯೆಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಯವರೂ ಸಹ ಕಾರಣರಾಗಿದ್ದಾರೆ; 321 ಗ್ರಾಮ ಪಂಚಾಯಿತಿಗಳನ್ನು ಸ್ವಚ್ಛವಾಗಿಡಲು ಸೂಚನೆ ನೀಡಿದ್ದಾಗ್ಯೂ ಸಹ ತುಮಕೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛತೆ ಕಾಪಾಡದಿರುವ ಕಾರಣ ತುಮಕೂರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರ ವಿರುದ್ಧ ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:-ಉಪಕಾರ್ಯದರ್ಶಿ(ಅಭಿವೃದ್ಧಿ).ಜಿ.ಪಂ.ತುಮಕೂರು )**

ಮಾನ್ಯ ಸದಸ್ಯರಾದ ಶ್ರೀಮತಿ ಸಿ.ಆರ್.ಮಂಜುಳಾ ರವರು, ಕೋಡ್ಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲುತೊಟ್ಟಿ ನಿರ್ಮಾಣ ಕಾಮಗಾರಿಯನ್ನು KRIDLನವರು ಇನ್ನೂ ಪ್ರಾರಂಭಿಸಿರುವುದಿಲ್ಲ ಎಂದು ಆಕ್ಷೇಪಿಸಿದರು. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಮಧುಗಿರಿ ಇವರು, KRIDLನವರು ಸದರಿ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂದು ಪಂ.ರಾ.ಇಂ.ಉಪ ವಿಭಾಗ, ಮಧುಗಿರಿ ಕಛೇರಿಗೆ ನೀಡಿದ್ದು, ಪ್ರಸ್ತುತ ಅಂದಾಜುಪಟ್ಟಿ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಪಂಚಾಯಿತಿ ಕಡತವನ್ನು ಪರಿಶೀಲಿಸಿ ಕ್ರಮವಹಿಸುವಂತೆ ತಿಳಿಸಿದರು.

**( ಕ್ರಮ:-ಸ.ಕಾ.ಪಾ.ಇಂ.ಪಂ.ರಾ.ಇ.ಉಪವಿಭಾಗ,ಮಧುಗಿರಿ )**

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಕಳೆದ ಮೂರು ವರ್ಷಗಳ ಹಿಂದೆ ಮಂಜೂರಾಗಿದ್ದ ಹೊಳವನಹಳ್ಳಿ ಹೋಬಳಿ ಅಕ್ಕಾಜಿಹಳ್ಳಿ ಗ್ರಾಮದ ಮೇಲುತೊಟ್ಟಿ ನಿರ್ಮಾಣ ಕಾಮಗಾರಿಯನ್ನೂ ಇದೇ ರೀತಿ ಮಾಡಿರುತ್ತಾರೆ, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಎಚ್ಚರಿಕೆ ನೀಡಬೇಕು ಎಂದು ಕೋರಿದರು. ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು, ಅಂದಾಜುಪಟ್ಟಿ ತಯಾರಿಸಿ ಅನುಮೋದನೆಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಯಶೋಧ ರವರು, ಗುಡ್ಡೇಹಳ್ಳಿ ಗ್ರಾಮದಲ್ಲಿ ನೀರಿಗೆ ಸಮಸ್ಯೆಯಿದ್ದು, ಸ್ವಾಂದೇನಹಳ್ಳಿಯಿಂದ ನೀರು ಒದಗಿಸುವಂತೆ ಕಳೆದ ಸಭೆಯಲ್ಲಿ ಸೂಚಿಸಲಾಗಿತ್ತು; ಅದರಂತೆ ನೀರು ಒದಗಿಸು ತ್ತಿದ್ದು, ಇತ್ತೀಚಿನ ಒಂದು ವಾರದಿಂದ ನೀರು ಒದಗಿಸದೆ ಸಮಸ್ಯೆಯಾಗಿದೆ; ಪೈಪ್ ಲೈನ್ ಆಗಿರುವುದಿಲ್ಲ; ಈ ಹಿಂದೆ ಟ್ಯಾಂಕರ್ ಮೂಲಕ ನೀರು ಒದಗಿಸಿರುವ ಬಾಬ್ತು ಹಣ ಪಾವತಿಯಾಗಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಕಾರ್ಯನಿರ್ವಾಹಕ ಅಧಿಕಾರಿಯವರು, ನೀರಿನ ಇಳುವರಿ ಕಡಿಮೆಯಾಗಿರುವುದರಿಂದ ಟ್ಯಾಂಕರ್ ಮೂಲಕ ನೀರು ಕೊಡಲಾಗುತ್ತಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಈ ಕುರಿತು ಪರಿಶೀಲಿಸಿ ನಾಳೆಯಿಂದಲೇ ಕುಡಿಯುವ ನೀರು ಒದಗಿಸಲು ಕ್ರಮವಹಿಸುವಂತೆ AEE,RWS, ಇವರಿಗೆ ತಿಳಿಸಿದರು.

**( ಕ್ರಮ:- AEE,RWS,ಮಧುಗಿರಿ )**

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಮೇಲುತೊಟ್ಟಿ ಕಾಮಗಾರಿ ಪೂರ್ಣಗೊಂಡು ಮೂರು ವರ್ಷವಾದರೂ ಸದರಿ ಮೇಲುತೊಟ್ಟಿಗೆ ನೀರು ಬಿಟ್ಟಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ವಿಭಾಗ ಇವರು, ಎಲ್ಲ ಕಾಮಗಾರಿಗಳನ್ನೂ ನೋಡಿ ಮಾಡಿಕೊಡುವುದಾಗಿ ಸಭೆಗೆ ತಿಳಿಸಿದರು.

**( ಕ್ರಮ:- EE, RWS, ತುಮಕೂರು)**

ಮಾನ್ಯ ಅಧ್ಯಕ್ಷರು, ಎಲ್ಲ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಸೂಚನೆ ನೀಡಿ, ಸ್ಥಳ ಪರಿಶೀಲನೆ ಮಾಡಿ ನ್ಯೂನತೆಯನ್ನು ಸರಿಪಡಿಸುವಂತೆ ಕಾರ್ಯ ಪಾಲಕ ಇಂಜಿನಿಯರ್, RWS ರವರಿಗೆ ತಿಳಿಸಿದರು. ನಂತರ, ಮಧುಗಿರಿ ತಾಲ್ಲೂಕು ಅಂದ್ರಾಳು ಗ್ರಾಮಕ್ಕೆ ತಾವು ಖುದ್ದು ಭೇಟಿ ನೀಡಿ ವೀಕ್ಷಿಸಿದ ಸಂದರ್ಭದಲ್ಲಿ,

ಅಲ್ಲಿ ನೀರು ಬಿಡದೆ ನೀರಿನ ಬಾಬ್ತು ರೂ.1.30ಲಕ್ಷ ಹಣ ಸೆಳೆದಿರುತ್ತಾರೆ; ಈ ಹಿನ್ನೆಲೆಯಲ್ಲಿ ಒಂದು ವಾರದಲ್ಲಿ ಕೊಳವೆಬಾವಿ ಕೊರೆಸಿ ನೀರಿಗೆ ವ್ಯವಸ್ಥೆಗೊಳಿಸಲಾಯಿತು ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್ RWSರವರು, 15 ದಿನಗಳೊಳಗಾಗಿ ವ್ಯವಸ್ಥೆಗೊಳಿಸಿಕೊಡುವುದಾಗಿ ಸಭೆಗೆ ಭರವಸೆಯಿತ್ತರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಎಲ್ಲ ಯೋಜನೆಗಳಡಿ( RWS/MWS/OHT etc.,) ತಾಲ್ಲೂಕುವಾರು ವರದಿಯನ್ನು 15 ದಿನಗಳೊಳಗಾಗಿ ಸಲ್ಲಿಸುವಂತೆ ಕಾರ್ಯ ಪಾಲಕ ಇಂಜಿನಿಯರ್, RWSರವರಿಗೆ ತಿಳಿಸಿದರು.

**(ಕ್ರಮ:-ಕಾ.ಪಾ.ಇಂ.ಗ್ರಾಮೀಣ ಕುಡಿಯುವ ನೀರು ವಿಭಾಗ, ತುಮಕೂರು )**

**ವಿಷಯ ಸೂಚಿ. 1 : ಕುಡಿಯುವ ನೀರು ಹಾಗೂ ನೈರ್ಮಲೀಕರಣ, ವಿವಿಧ ಯೋಜನೆಗಳ ಪ್ರಗತಿ ಕುರಿತು ಚರ್ಚೆ:-**

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ಮಹಲಿಂಗಪ್ಪನವರು, ಕೊರಟಗೆರೆ ತಾಲ್ಲೂಕಿನಲ್ಲಿ 11 ಡೀ-ಫ್ಲೋರೈಡ್ ಘಟಕಗಳ ಕಾಮಗಾರಿ ಪ್ರಾರಂಭವಾಗಿ ಒಂದು ವರ್ಷ ಕಳೆದರೂ ಈವರೆಗೆ ಪೂರ್ಣಗೊಂಡಿರುವುದಿಲ್ಲ ಎಂದು ಆಕ್ಷೇಪಿಸಿ, ಕಾಮಗಾರಿಗೆ ನಿಗಧಿಪಡಿಸಿರುವ ಸಮಯ ಮುಗಿದಿದೆಯೋ? ಅಥವಾ ಇನ್ನೂ ಸಮಯ ಇದೆಯೋ? ಕಾಮಗಾರಿ ಇನ್ನೂ ಏಕೆ ಬಾಕಿ ಉಳಿದಿದೆ? ಎಂಬ ಬಗ್ಗೆ ತಿಳಿಸಬೇಕು ಎಂದು ಕೋರಿದಾಗ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ., ಕೊರಟಗೆರೆ ಇವರು, 11 ಘಟಕಗಳ ಪೈಕಿ ಐದು ಕಾಮಗಾರಿಗಳು ಪೂರ್ಣಗೊಂಡಿವೆ; ಗುತ್ತಿಗೆದಾರರ ನಿರ್ಲಕ್ಷ್ಯತೆಯಿಂದ ಉಳಿದ ಕಾಮಗಾರಿಗಳು ಅಪೂರ್ಣವಾಗಿವೆ; ಸಂಬಂಧಪಟ್ಟ ಗುತ್ತಿಗೆದಾರರಿಗೆ ಪತ್ರ ಮುಖೇನ ತಿಳಿಸಿರುವುದಲ್ಲದೆ ಅನೇಕ ಬಾರಿ ಮೌಖಿಕವಾಗಿ ತಿಳಿಸಿದ್ದಾಗ್ಯೂ ಸಹ ಅವರು ಪ್ರತಿಕ್ರಿಯಿಸುತ್ತಿಲ್ಲ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಕಾರ್ಯಪಾಲಕ ಇಂಜಿನಿಯರ್ ರವರು, ಎಲ್ಲ 11 ಘಟಕಗಳ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಕೇವಲ ಪ್ಲ್ಯಾಂಟ್ ಕಮಿಷನಿಂಗ್ ಆಗಬೇಕಾಗಿದ್ದು, ಗುತ್ತಿಗೆದಾರರಿಂದ ತೊಂದರೆಯಾಗಿದೆ ಎಂದು ತಿಳಿಸಿ, ದಿನಾಂಕ 30-11-2014 ರೊಳಗೆ ಪೂರ್ಣಗೊಳಿಸಿಕೊಡು ವುದಾಗಿ ಸಭೆಗೆ ಭರವಸೆಯಿತ್ತರು.

**( ಕ್ರಮ:- EE, RWS, ತುಮಕೂರು)**

ಮಾನ್ಯ ಸದಸ್ಯರು ಮುಂದುವರಿದು, ಡಿ.ನಾಗೇನಹಳ್ಳಿ ಗ್ರಾಮದಲ್ಲಿ ಡಿ-ಫ್ಲೋರೈಡ್ ಘಟಕವನ್ನು ಗುಂಡಿಯಲ್ಲಿ ಕಟ್ಟಿದ್ದಾರೆ; ಅಲ್ಲಿನ ಜನ ಚುನಾಯಿತ ಪ್ರತಿನಿಧಿಗಳ ವಿರುದ್ಧ ಗಲಾಟೆ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿ, ಘಟಕ ನಿರ್ಮಾಣದ ಕುರಿತು ಮೊದಲೇ ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಿಳಿಸಿದ್ದರೆ ಸಮಸ್ಯೆಯನ್ನು ಬಗೆಹರಿಸಬಹುದಿತ್ತು ಆದರೆ ಸಂಬಂಧಪಟ್ಟ ಅಧಿಕಾರಿಗಳು ಯಾರೊಬ್ಬ ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಾರದೆ ಕಾಮಗಾರಿ ನಿರ್ವಹಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಈ ಮಾತಿಗೆ ಸಭೆಯಲ್ಲಿ ಉಪಸ್ಥಿತರಿದ್ದ ಅನೇಕ ಮಾನ್ಯ ಸದಸ್ಯರುಗಳು ಸಹಮತ ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರು, ಕೂಡಲೇ ಸ್ಥಳ ಪರಿಶೀಲಿಸಿ ಗುಂಡಿಯನ್ನು ಮುಚ್ಚಿಸಿ ಸಮಸ್ಯೆ ಬಗೆಹರಿಸುವಂತೆ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಪುರದಹಳ್ಳಿ ಗ್ರಾಮದಲ್ಲಿ ಡಿ-ಫ್ಲೋರೈಡ್ ಘಟಕವನ್ನು ತಿಪ್ಪೆ ಗುಂಡಿಯಲ್ಲಿ ಕಟ್ಟಿರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ಜಿ.ಪಂ.ಮಾನ್ಯ ಸದಸ್ಯರುಗಳು ತಮ್ಮ-ತಮ್ಮ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಗಮನಹರಿಸಬೇಕು ಎಂದು ಕಿವಿಮಾತು ಹೇಳಿದರು.

**(ಕ್ರಮ:-ಕಾ.ಪಾ.ಇಂ.ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು )**

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು ಚಿ.ನಾ.ಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಯಾವುದೇ ಡಿ-ಫ್ಲೋರೈಡ್ ಘಟಕಗಳ ಉದ್ಘಾಟನೆಯಾಗಿರುವುದಿಲ್ಲ; ಕುಡಿಯುವ ನೀರಿನಲ್ಲಿ ಫ್ಲೋರೈಡ್ ಇರುವ ಕುರಿತು ಪ್ರಸ್ತಾಪ ಮಾಡಲಾಗಿದೆ; ಟೆರಾ ಫಿಲ್ಟರ್ ಬಗ್ಗೆ ಜನರಿಗೆ ವಿಶ್ವಾಸವಿಲ್ಲ; ಅಲ್ಲದೆ ಚುನಾಯಿತ ಪ್ರತಿನಿಧಿಗಳು ಬೇಡವೆಂದರೂ ಅಧಿಕಾರಿಗಳು ಎಲ್ಲೆಡೆ ಸೊಳ್ಳೆ, ನೊಣ, ಹಂದಿ ವಾಸ ಮಾಡುವ ತಿಪ್ಪೆ ಗುಂಡಿಗಳಲ್ಲಿ ಘಟಕ (ಕಟ್ಟಡ) ನಿರ್ಮಾಣ ಮಾಡಿದ್ದಾರೆ; ಆದಷ್ಟು ಜಾಗ್ರತೆ ಡಿ-ಫ್ಲೋರೈಡ್ ಘಟಕಗಳ ಉದ್ಘಾಟನೆಯಾಗಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಯಾವುದೇ Terra ಫಿಲ್ಟರ್ ನಲ್ಲಿ ನೀರು ಫಿಲ್ಟರ್ ಆಗುತ್ತಿಲ್ಲವೆಂದು ಅಲ್ಲಿಂದ ಯಾರೂ ನೀರು ತಂದು ಕುಡಿಯುತ್ತಿಲ್ಲ ಎಂದು ಆಕ್ಷೇಪಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತು/ಜಿಲ್ಲಾ ಪಂಚಾಯತ್ ಸದಸ್ಯರುಗಳು, ಮಾನ್ಯ ಶಾಸಕರುಗಳು ಮತ್ತು ಅಧಿಕಾರಿಗಳು ಇತ್ಯಾದಿ ಇಷ್ಟೆಲ್ಲ ಮಂದಿ ಇದ್ದೂ ಯಾರೂ ನೋಡಿಲ್ಲವೆ? ಅನ್ಯಾಯ ನಡೆಯುವಾಗ ಎಲ್ಲರೂ ಏನು ಮಾಡುತ್ತಿರುತ್ತೀರಿ? ಎಂದು ಆಕ್ರೋಶ ವ್ಯಕ್ತಪಡಿಸಿ, ಅಧಿಕಾರಿಗಳು ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರುಗಳಲ್ಲಿ ಗೌರವ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಇನ್ನು ಮುಂದೆ ಪ್ರತಿ ಇಲಾಖೆಯ ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯನ್ನು ತಾವೇ ಖುದ್ದು ಪರಿಶೀಲಿಸುವುದಾಗಿ ಸಭೆಗೆ ತಿಳಿಸಿದರು. ಗುಂಡಿ ಮುಚ್ಚಿಸಿಕೊಡುವುದಾಗಿ ಸಂಬಂಧಪಟ್ಟ ಗುತ್ತಿಗೆದಾರರು ತಿಳಿಸಿದ್ದಾರೆಂದು ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು ಸಭೆಗೆ ತಿಳಿಸಿದರು.

**( ಕ್ರಮ:- EE, RWS, ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಅಧಿಕಾರಿಗಳು ಮಾನ್ಯ ಶಾಸಕರುಗಳನ್ನು ಹೊರತುಪಡಿಸಿ ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಯಾವುದೇ ಸಂದರ್ಭಕ್ಕೂ ಪರಿಗಣನೆಗೆ ತೆಗೆದುಕೊಳ್ಳು ವುದಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಎನ್.ಜಿ. ಮಂಜುಳ ರವರು, ಹುಳಿಯಾರು ಕ್ಷೇತ್ರ ವ್ಯಾಪ್ತಿಯ ಬೋರನಕಣಿವೆ ಗ್ರಾಮದಲ್ಲಿಯ ನೀರಿನ ಕಲ್ಮಶದ ಕುರಿತು ಸಭೆಯ ಗಮನ ಸೆಳೆದರು. ಪ್ರತಿಯಾಗಿ ಕಾರ್ಯ ನಿರ್ವಾಹಕ ಅಧಿಕಾರಿಯವರು, ಸದರಿ ಪ್ರಕರಣದಲ್ಲಿ ತಾಂತ್ರಿಕ ದೋಷವಿರುವ ಬಗ್ಗೆ ಈಗಾಗಲೇ ವರದಿ ಮಾಡಲಾಗಿದೆ ಎಂದು ತಿಳಿಸಿ, ತ್ವರಿತವಾಗಿ ಸರಿಪಡಿಸಿಕೊಡುವುದಾಗಿ ಸಭೆಗೆ ಭರವಸೆಯಿತ್ತರು.

**(ಕ್ರಮ:- ಕಾ.ನಿ.ಅ.ತಾ.ಪಂ.ಚಿ.ನಾ.ಹಳ್ಳಿ)**

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಚಿ.ನಾ.ಹಳ್ಳಿ ತಾಲ್ಲೂಕಿಗೆ ಎಷ್ಟೆಷ್ಟು ಡಿ-ಫ್ಲೋರೈಡ್ ಘಟಕಗಳು/ಟೆರಾ ಫಿಲ್ಟರ್ ಗಳು ಮಂಜೂರಾಗಿವೆ? ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಇವೆ ಎಂಬ ಬಗ್ಗೆ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಮಾಹಿತಿ ಪಡೆದುಕೊಂಡರು.

**( ಕ್ರಮ:- EE, RWS, ತುಮಕೂರು)**

ಮಾನ್ಯ ಸದಸ್ಯರಾದ ಶ್ರೀಮತಿ ಸಿ.ಆರ್.ಮಂಜುಳಾ ರವರು, ಪುರುವರ ಹೋಬಳಿ, ಮುಳುಬಾಗಿಲುಪಾಳ್ಯದ ಡಿ-ಪ್ಲೋರೈಡೇಷನ್ ಘಟಕಕ್ಕೆ ನೀರು ಹಂಚಿಕೆಯಾಗಿದೆ ಆದರೆ ಬೇರೆಡೆ ಎಲ್ಲಿಯೂ ನೀರು ಹಂಚಿಕೆಯಾಗಿಲ್ಲ; ಪುರವರ ಕ್ಷೇತ್ರವು ಅತ್ಯಂತ ಹಿಂದುಳಿದ ಕ್ಷೇತ್ರವಾಗಿದ್ದು, ವೀರ ನಾಗೇನಹಳ್ಳಿಯಿಂದ ತಮ್ಮಡಿಹಳ್ಳಿಯವರೆಗಿನ ಪಿ.ಎಂ.ಜಿ.ಎಸ್.ವೈ./ಪಿ.ಡಬ್ಲ್ಯೂ.ಡಿ. ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕಳೆದ 8-10 ವರ್ಷಗಳಿಂದ ನಿರ್ವಹಿಸಿರುವುದಿಲ್ಲ, ಪುರವರದಿಂದ ಬಡಕನಹಳ್ಳಿ-ಗಿಡದಾಗಲಹಳ್ಳಿ ಮಧ್ಯೆ ಎರಡೂವರೆ ಅಡಿ ಆಳದ ಗುಂಡಿ ಇದೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಕೂಡಲೇ ರಸ್ತೆ ಕಾಮಗಾರಿ ನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು. ಮಾನ್ಯ ಅಧ್ಯಕ್ಷರು, ಪಿ.ಡಬ್ಲ್ಯೂ.ಡಿ.ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ನೋಟೀಸ್ ನೀಡುವಂತೆ ಉಪ ಕಾರ್ಯದರ್ಶಿ(ಆಡಳಿತ)ಯವರಿಗೆ ತಿಳಿಸಿದರು.

1) (ಕ್ರಮ:- ಉಪ ಕಾರ್ಯದರ್ಶಿ(ಆಡಳಿತ),ಜಿಲ್ಲಾ ಪಂಚಾಯತ್ ತುಮಕೂರು.)

2) ( ಕ್ರಮ:- E.E., P.W.D. Tumkur & E.E., P.M.G.S.Y. Sira )

ಮುಂದುವರಿದು, ಮುಂದಿನ ದಿನಗಳಲ್ಲಿ ಕಾಮಗಾರಿ ಪ್ರಾರಂಭ ಮಾಡುವ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಸರಿ-ತಪ್ಪಿನ ಬಗ್ಗೆ ಮಾಹಿತಿ ಕೊಡಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ಇತ್ತರು.

( ಕ್ರಮ:- EE,PRED, TUMKUR/ MADHUGIRI / EE, RWS, TUMKUR / EE, PMGSY, TUMKUR/ SIRA)

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು, ಸಿ.ಎಸ್.ಪುರ ರಾಜೀವ್ ಗಾಂಧಿ ಸಬ್ಮಿಷನ್ ಯೋಜನೆಯ ಅನುಷ್ಠಾನದ ಕುರಿತು ಸಭೆಯಲ್ಲಿ ಪುನರುಚ್ಛರಿಸಿದರು. ಮಾನ್ಯ ಅಧ್ಯಕ್ಷರು, ಈ ವಿಷಯದ ಬಗ್ಗೆ ಈಗಾಗಲೇ ದಿನಾಂಕ 29-10-2014ರಂದು ನಡೆದ ತ್ರೈಮಾಸಿಕ ಕೆ.ಡಿ.ಪಿ.ಸಭೆಯಲ್ಲಿ ಚರ್ಚಿಸಿರುವುದಾಗಿ ತಿಳಿಸಿದರು. ಮಾನ್ಯ ಸದಸ್ಯರು ಮುಂದುವರಿದು, ಮೇಲುತೊಟ್ಟಿ ಕಾಮಗಾರಿಗಳು ಕೆಲವು ಬಾಕಿ ಇದ್ದು, ಕಾಮಗಾರಿ ಪೂರ್ಣಗೊಂಡಿರುವ ಪ್ರಕರಣಗಳಿಗೆ (ಉದಾಹರಣೆಗೆ ಗುಬ್ಬಿ ತಾಲ್ಲೂಕು ದೊಡ್ಡಗುಣಿ ಗ್ರಾಮದ ಮೇಲುತೊಟ್ಟಿ ಕಾಮಗಾರಿ ಪೂರ್ಣಗೊಂಡಿರುತ್ತದೆ)ಸಂಬಂಧಪಟ್ಟ ಗುತ್ತಿಗೆದಾರರುಗಳಿಗೆ ಈವರೆವಿಗೂ ಹಣ ಪಾವತಿಯಾಗಿರುವುದಿಲ್ಲ ಹಾಗೂ ಯಾವುದೇ ಒಂದು ಮೇಲುತೊಟ್ಟಿಯಿಂದ ನೀರು ಹೊರಗೆ ಬಿಟ್ಟಿಲ್ಲ ಎಂದು ಆಕ್ಷೇಪಿಸಿ, ಜಿಲ್ಲೆಯಲ್ಲಿ ಎಷ್ಟು ಮೇಲುತೊಟ್ಟಿಗಳು ಮಂಜೂರಾಗಿವೆ? ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ? ಎಷ್ಟು ಕಾಮಗಾರಿಗಳು ಇನ್ನೂ ಪ್ರಾರಂಭವಾಗಿಲ್ಲ? ಕಾಮಗಾರಿ ಪೂರ್ಣಗೊಂಡ ಎಷ್ಟು ಪ್ರಕರಣಗಳಿಗೆ ಹಣ ಪಾವತಿಸಲಾಗಿದೆ ಎಂಬ ಅಂಶಗಳ ಕುರಿತು EE, RWS, ತುಮಕೂರು ರವರು, ಸೂಕ್ತ ಮಾಹಿತಿ ನೀಡಬೇಕು ಎಂದು ಕೋರಿದರು. ಈ ಮಾತಿಗೆ ಮಾನ್ಯ ಸದಸ್ಯರಾದ ಡಾ: ರವಿಯವರು ಸಹಮತ ವ್ಯಕ್ತಪಡಿಸಿದರು.

( ಕ್ರಮ:- EE, RWS, ತುಮಕೂರು)

ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಐ.ಎಂ.ಐ.ಎಸ್. ಯೋಜನೆಯಡಿ ಸರ್ಕಾರದಿಂದ ಹಣ ಜಮೆಯಾಗುವಲ್ಲಿ ವಿಳಂಬ/ತೊಂದರೆಯಾಗಿರುವುದರಿಂದ ಕೆಲವು ಬಿಲ್ ಗಳು ಪಾವತಿಗೆ ಬಾಕಿ ಉಳಿದಿರುವುದಾಗಿ ಸಭೆಗೆ ತಿಳಿಸಿದರು. ಮಾನ್ಯ ಸದಸ್ಯರು ಮುಂದುವರಿದು, ಡಿಸೆಂಬರ್-2013ರಲ್ಲಿ ಕಾಮಗಾರಿ ಪೂರ್ಣಗೊಳಿಸಿರುವವರಿಗೆ ಬಿಲ್ ಪಾವತಿಯಾಗಿದೆ, ಆದರೆ ಮಾರ್ಚ್ ನಲ್ಲಿ ಕೆಲಸ ಪೂರ್ಣಗೊಳಿಸಿರು ವವರಿಗೆ ಈವರೆವಿಗೂ ಬಿಲ್ ಪಾವತಿಯಾಗಿರುವುದಿಲ್ಲ ಎಂದು ಆಕ್ಷೇಪಿಸಿದರು. ಪೂರಕವಾಗಿ, ಸದಸ್ಯರಾದ

ಡಾ:ರವಿಯವರು, ಆರ್.ಟಿ.ಜಿ.ಎಸ್. ಆಗಿದ್ದರೂ ಸಹ ಬ್ಯಾಂಕ್ ನಲ್ಲಿ ಗುತ್ತಿಗೆದಾರರುಗಳ ಬಿಲ್ ಗಳು honour ಆಗುತ್ತಿಲ್ಲ; ಶಕ್ತಿ ಇರುವವರು ಶಿಫಾರಸು ಮಾಡಿಸಿ ಬೆಂಗಳೂರಿಗೆ ಹೋಗಿ ಬಿಲ್ ಹಣ ಪಾವತಿಸಿಕೊಳ್ಳುತ್ತಾರೆ; ಆದರೆ 2-3ಲಕ್ಷ ಮೊತ್ತದ ಬಿಲ್ ಗಳು honour ಆಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಅಧ್ಯಕ್ಷರು, ಜಿಲ್ಲೆಯಲ್ಲಿ ರೂ.6.00ಕೋಟಿ ಮೊತ್ತದ ಬಿಲ್ ಗಳು ಪಾವತಿಗೆ ಬಾಕಿ ಇವೆ; ಬ್ಯಾಂಕ್ ಖಾತೆಯಲ್ಲಿರುವ ಮೊತ್ತಕ್ಕೂ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತಕ್ಕೂ ರೂ.6.00ಕೋಟಿ ವ್ಯತ್ಯಾಸವಿದೆ; ಈ ನಿಟ್ಟಿನಲ್ಲಿ ಇಲಾಖೆಯವರೊಂದಿಗೆ ಸಮಾಲೋಚಿಸಿ ಬಿಲ್ ಮೊತ್ತ ಪಾವತಿಗೆ ವ್ಯವಸ್ಥೆ ಮಾಡಲಾಗುವುದು ಎಂದು ಸಭೆಗೆ ಭರವಸೆಯಿತ್ತರು.

**( ಕ್ರಮ:- EE, RWS, ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ರವರು, ಕುಡಿಯುವ ನೀರು ಪೂರೈಕೆಗಾಗಿ ಕ್ರಿಯಾ ಯೋಜನೆ ತಯಾರಿಸಿದ್ದು, ಎಸ್ಟಿಮೇಟೆಡ್ ಕಾಸ್ಟ್ ಅನ್ವಯ ಕಾಮಗಾರಿ ಪೂರ್ಣಗೊಂಡಿರುವ ಮೇಲುತೊಟ್ಟಿಗಳ ವಿದ್ಯುದೀಕರಣಕ್ಕೆ ಡಿಪಾಸಿಟ್ ಕಟ್ಟಿದ್ದರೂ ಸಹ ಕೆ.ಇ.ಬಿ.ವತಿಯಿಂದ ಕೆಲಸವಾಗದೆ ಕುಡಿಯುವ ನೀರಿನ ಕೆಲಸಗಳು ಆಗಿಲ್ಲ ಎಂದು ಸಭೆಗೆ ತಿಳಿಸಿ, ವಿದ್ಯುದೀಕರಣ ಸಂಬಂಧ ಮಾರ್ಚ್-2015ರ ವರೆಗೆ ಹಿಂದಿದ್ದ ಪದ್ಧತಿಯನ್ನೇ ಮುಂದುವರೆಸಬೇಕು ಎಂದು ಕೋರಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು; ಈ ವಿಚಾರವನ್ನು ಸಚಿವರಿಗೆ ತಿಳಿಸಲಾಗಿದೆ; ಸರ್ಕಾರದಿಂದ ರೂ.52.00 ಕೋಟಿ ಅನುದಾನ ಬಿಡುಗಡೆಯಾಗಿದೆ; ರಾಜ್ಯಮಟ್ಟದಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಖಾತೆ ತೆರೆಯಲಾಗಿದೆ; ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಜಂಟಿ ಹೆಸರಿನಲ್ಲಿ RTGS ಆಗುತ್ತದೆ; ಬ್ಯಾಂಕ್ ಮತ್ತು ಸರ್ಕಾರಿ ಆದೇಶದನ್ವಯ ಹಣ ಸಮನ್ವಯವಾಗದೆ (Reconciliation) ಬಿಲ್ ಪಾವತಿ ವಿಳಂಬವಾಗಿದೆ; ಮುಖ್ಯ ಲೆಕ್ಕಾಧಿಕಾರಿಯವರು ಬ್ಯಾಂಕ್ ನವರೊಂದಿಗೆ ಮಾತನಾಡಿದ್ದಾರೆ; ರೂ.42.00 ಕೋಟಿ ಅಡ್ಜಸ್ಟ್ ಆಗಿದೆ; ಆದಾಗ್ಯೂ ಮೇಲುತೊಟ್ಟಿ ಕೆಲಸ ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರದ ಜೊತೆ ಸಮಾಲೋಚಿಸಿ ರೂ.40.00 ಕೋಟಿ ಅಡ್ಜಸ್ಟ್ ಆಗಿದ್ದು, ಬಿಲ್ ಹಣ ಪಾವತಿ ಮಾಡಲು ವ್ಯವಸ್ಥೆ ಮಾಡಲಾಗಿದೆ; ಈ ವರ್ಷ ಬಿಲ್ ಪಾವತಿಗೆ ಬಾಕಿ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಆರ್.ಟಿ.ಜಿ.ಎಸ್.ಮೂಲಕ ಬ್ಯಾಂಕ್ ಗೆ ಕಳುಹಿಸಲಾಗಿದೆ; ಕಳೆದ ವಾರದ ಮಾಹಿತಿಯ ಪ್ರಕಾರ ಬಿಲ್ honour ಮಾಡಿದ್ದಾರೆ; ರೂ.6.00 ಕೋಟಿ ಮೊತ್ತದ ಬಿಲ್ honour ಆಗಬೇಕು; ತುಮಕೂರು ವಿಭಾಗದಲ್ಲಿ ಪಾವತಿಗೆ ಬಾಕಿ ಇರುವ ರೂ.70.00ಲಕ್ಷ ಸೇರಿ ಒಟ್ಟು ರೂ.6.70 ಕೋಟಿ ಮೊತ್ತದ ಬಿಲ್ ಪಾವತಿಗೆ ಬಾಕಿ ಇರುವ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರಲಾಗಿದೆ; ಸಮಸ್ಯೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ಸಹ ತರಲಾಗಿದೆ; ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರೊಂದಿಗೂ ಸಹ ಸಮಾಲೋಚಿಸಲಾಗಿದೆಯಾದ್ದರಿಂದ ಮುಂದಿನ 4-5 ದಿನಗಳಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು, ರಾಜೀವ್ ಗಾಂಧಿ ಸಬ್ಮಿಷನ್ ಯೋಜನೆಯಡಿ ಸಿ.ಎಸ್.ಪುರ ಗ್ರಾಮದ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ನೀರು ಹಂಚಿಕೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಕಾವೇರಿ ನೀರಾವರಿ ನಿಗಮಕ್ಕೆ ಆದೇಶ ಮಾಡಿದ್ದು, ಮರು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ತಾಲ್ಲೂಕು ರಂಗಾಪುರದಲ್ಲಿ ಮೇಲುತೊಟ್ಟಿ ಕಟ್ಟಿದ್ದಾರೆ; ಅದಕ್ಕೆ ಅಂದಿನ ಸಂದರ್ಭದಲ್ಲಿ self executionಗೆ ವ್ಯವಸ್ಥೆ ಇರಲಿಲ್ಲ; deposit & energisationಗೆ ಅವಕಾಶ ಮಾಡಲು ವ್ಯವಸ್ಥೆ ಇತ್ತು; ರೂ.100/- ಕಟ್ಟಿ ನೋಂದಣಿ ಮಾಡಿಸಬೇಕಾಗಿತ್ತು; ಆದರೆ ನೊಂದಣಿಯಾಗಿಲ್ಲ; ಹಣ ಕಾಯ್ದಿರಿಸಿದೆ, self executionಗೆ ಅವಕಾಶವಿಲ್ಲ; ಗುತ್ತಿಗೆದಾರ ಮೇಲುತೊಟ್ಟಿಯನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿಲ್ಲ; ಹಸ್ತಾಂತರಿಸುವಲ್ಲಿ ಮಧ್ಯವರ್ತಿಗಳಿಂದ ಹಣ ವಸೂಲಿಯಾಗುತ್ತಿದೆ; ಗುತ್ತಿಗೆದಾರರು ಕಳಪೆ ಕಾಮಗಾರಿ ಮಾಡುತ್ತಿದ್ದಾರೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, ಬೆಂಬಲ ವ್ಯಕ್ತಪಡಿಸಿದರಲ್ಲದೆ ಕಳಪೆ ಕಾಮಗಾರಿಯ ಕುರಿತು ತನಿಖೆಯಾಗಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ನಾಗಮ್ಮನವರು, ಕಡಬ ಕ್ಷೇತ್ರ ವ್ಯಾಪ್ತಿಯ ದಾಸರಕಲ್ಲಹಳ್ಳಿ, ದೊಡ್ಡ ಕುನ್ನಾಲ ಮತ್ತು ಚಿಕ್ಕ ಕುನ್ನಾಲ ಗ್ರಾಮಗಳಲ್ಲಿ ಮೇಲುತೊಟ್ಟಿ ಕಾಮಗಾರಿ ಪೂರ್ಣಗೊಂಡಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಇಂಜಿನಿಯರ್ ಗಳು ಗುತ್ತಿಗೆದಾರರಿಗೆ ಗುತ್ತಿಗೆ ವಹಿಸಿದ ಮೇಲೆ proper supervision ಮಾಡಬೇಕು; ಈ ಎಲ್ಲ ಅವಾಂತರಗಳಿಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳೇ ಕಾರಣರಾಗುತ್ತಾರೆ ಎಂದು ಸಭೆಗೆ ತಿಳಿಸಿದರು.

**( ಕ್ರಮ:- All AEE's, RWS )**

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು, ಬೈಚೇನಹಳ್ಳಿ, ಮಾರನಹಳ್ಳಿ, ಎಂ.ಎಂ.ಕಾವಲ್ ಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್ ಕಡೆಯಿಂದ ಗುತ್ತಿಗೆದಾರರಿಗೆ 10-12ಬಾರಿ ನೋಟೀಸ್ ಜಾರಿ ಮಾಡಿಸಿದ್ದರೂ ಸಹ ಆತ ಬಂದು ಸೈಟ್ ನೋಡಿರುವುದಿಲ್ಲ; ಕಾರ್ಯ ವಿಳಂಬ ಮಾಡಿ ಎಸ್ಟಿಮೇಟ್ ಹಳೆಯ ಎಸ್.ಆರ್. ಅಂತಲೋ ಇಲ್ಲವೇ ಇನ್ನಾವುದೋ ಕಾರಣದಿಂದ ಕಳಪೆ ಕಾಮಗಾರಿ ಮಾಡುತ್ತಾರೆ; ಆದುದರಿಂದ ಟೆಂಡರ್ ಆದಾಗ ನಿಗಧಿತ ಕಾಲ ಮಿತಿಯಲ್ಲಿ ಕಾಮಗಾರಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕೆಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು ಸಂಬಂಧಪಟ್ಟ ಗುತ್ತಿಗೆದಾರನಿಗೆ ಕಟ್ಟು-ನಿಟ್ಟಿನ ನಿರ್ದೇಶನ ನೀಡಿದ ಪಕ್ಷದಲ್ಲಿ ಸದರಿ ಗುತ್ತಿಗೆದಾರ ನಿಗಧಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕನಿಷ್ಟ ಮೊತ್ತದ ಹಣವನ್ನಾದರೂ ಉಳಿಸಿಕೊಳ್ಳಬಹುದು(save) ಎಂದು ಸಲಹೆಯಿತ್ತರು.

ಮಾನ್ಯ ಸದಸ್ಯರಾದ ಡಾ: ರವಿಯವರು, 2011-12ನೇ ಸಾಲಿನ ಕಾಮಗಾರಿಗಳ ವಸ್ತುಸ್ಥಿತಿ (status) ಕುರಿತು ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸೇರಿ ದಿನಕ್ಕೆ 2-3 ತಾಲ್ಲೂಕುಗಳಲ್ಲಿ ಪ್ರಗತಿ ಪರಿಶೀಲಿಸಿ ಕಾಮಗಾರಿ ಪೂರ್ಣಗೊಳಿಸಲು ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಕಾಲಮಿತಿ ನಿಗಧಿಪಡಿಸಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಕುಡಿಯುವ ನೀರು ಯೋಜನೆಗಳ ಕಾಮಗಾರಿ duplication ಆಗಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿದೆ; ಇದು ಯಾವ ಹಂತಕ್ಕೆ ಹೋಗುತ್ತದೆಂದು ಹೇಳಲಾಗುವುದಿಲ್ಲ; ಇದು ಗಂಭೀರ ವಿಚಾರವಾಗಿದೆ ಎಂದು ತಿಳಿಸಿ, ತಾಲ್ಲೂಕುವಾರು ಅವ್ಯವಹಾರದ ವಿಚಾರ

ಗೊತ್ತಿದ್ದರೆ ಮಾಹಿತಿ ನೀಡಿದಲ್ಲಿ ಬೇರೆ ಇಂಜಿನಿಯರ್ ಕಡೆಯಿಂದ ಕೆಲಸ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮುಂದುವರಿದು, ಒಟ್ಟಾರೆ 376 ಮೇಲುತೊಟ್ಟಿ ಕಾಮಗಾರಿಗಳು ಮಂಜೂರಾಗಿರುವ ಪೈಕಿ 114 ಕಾಮಗಾರಿಗಳು ಪೂರ್ಣಗೊಂಡಿದ್ದು, 262 ಕಾಮಗಾರಿಗಳು ಬಾಕಿ ಇರುತ್ತವೆ; ಈ ಹಿಂದೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದ್ದ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಅವರು ತಿಳಿಸಿದ ಮೇರೆಗೆ ನಂತರ ಸದರಿ ಕಾಮಗಾರಿಗಳನ್ನು ಕರ್ನಾಟಕ ಭೂಸೇನಾ ನಿಗಮದವರಿಗೆ ವಹಿಸಲಾಗಿತ್ತು; ಆದರೆ 6-7 ತಿಂಗಳ ನಂತರ ಅವರೂ ಸಹ ಕಾಮಗಾರಿ ನಿರ್ವಹಿಸಲು ಸಾಧ್ಯವಿಲ್ಲವೆಂದು ವಾಪಸ್ ಮಾಡಿರುತ್ತಾರೆ, ಇದರಿಂದಾಗಿ ಮೇಲುತೊಟ್ಟಿ ನಿರ್ಮಾಣ ಮತ್ತು ಕಿರುನೀರು ಸರಬರಾಜು ಕಾಮಗಾರಿಗಳು 2011-12ನೇ ಸಾಲಿನಿಂದ ಬಾಕಿ ಇವೆ ಎಂದು ಸಭೆಗೆ ತಿಳಿಸಿದರು.

ನಂತರ, ನಾಳೆ ತಾಲ್ಲೂಕುವಾರು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಸದಸ್ಯರು ಎಲ್ಲರೂ ಸೇರಿದಾಗ ವಿಕಲಚೇತನರ ಶೇ.3%ರ ಮೀಸಲು ಅನುದಾನದಡಿ ಕ್ರಿಯಾ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ಎಷ್ಟು ಮೊತ್ತಕ್ಕೆ ಕ್ರಿಯಾ ಯೋಜನೆ ಮಾಡಲಾಗಿದೆ? ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ? ಇನ್ನೂ ಎಷ್ಟು ಕಾಮಗಾರಿಗಳು ಅಪೂರ್ಣವಾಗಿವೆ ಎಂಬ ಇತ್ಯಾದಿ ಮಾಹಿತಿಗಳ ಕುರಿತು ಪ್ರಗತಿ ಪರಿಶೀಲನೆ ಮಾಡಿದ ಹಾಗೆ ಆಗುತ್ತದೆ ಎಂದು ಸಭೆಗೆ ತಿಳಿಸಿದರು.

ನಂತರ, ಮೇಲುತೊಟ್ಟಿಗಳಿಗೆ ಕೆ.ಇ.ಬಿ.ವತಿಯಿಂದ ವಿದ್ಯುದೀಕರಣಗೊಳಿಸುವ ಬಗ್ಗೆ ಆಗಸ್ಟ್ ನಿಂದ ಸರ್ಕಾರದ ಮಟ್ಟದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಆದೇಶ ನೀಡಿದೆ; ಅದರಂತೆ, 01-08-2014 ಕ್ಕೆ 31 ಪ್ರಕರಣಗಳು ಇದ್ದು, ಮೊನ್ನೆಗೆ ಮೂರು ಪ್ರಕರಣಗಳನ್ನು(ಗೊಂದಲ ಸೃಷ್ಟಿಯಾಗಿರುವ ) (un registered) ಹೊರತುಪಡಿಸಿ ಉಳಿದೆಲ್ಲಾ ಪ್ರಕರಣಗಳೂ ಪೂರ್ಣಗೊಂಡಿವೆ ಎಂದು ತಿಳಿಸಿರುತ್ತಾರೆ; ಕಳೆದ ವರ್ಷಕ್ಕೆ ಕೆ.ಇ.ಬಿ.ಗೆ ರಿಜಿಸ್ಟರ್ ಮಾಡಿಸದ ಹಾಗೂ ಮುಂದುವರಿದ ಕಾಮಗಾರಿಗೂ ಸೇರದ ಪ್ರಕರಣಗಳನ್ನು ತಂದು ಐ.ಎಂ.ಐ.ಎಸ್. ಅಡಿ ಸೇರಿಸಲು ಆಗದಿದ್ದರೆ ಕಾರ್ಯಪಡೆಗೆ ಸೇರಿಸಿ ಹಣ ಒದಗಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಕುಡಿಯುವ ನೀರಿಗೆ ಹಣದ ಪ್ರಶ್ನೆಯೇ ಬೇಡ; ಅಧಿಕಾರಿಗಳು ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಅಮೃತೂರು ಹೋಬಳಿ ಪಡುವಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆನವಾರ ಗ್ರಾಮದಲ್ಲಿ ರೂ.15.00ಲಕ್ಷ ಮೊತ್ತದ ಕಾಮಗಾರಿ ನಡೆದಿದ್ದು, ಅದನ್ನು ಮುಂದುವರಿದ ಕಾಮಗಾರಿ ಮಾಡುವಾಗ ಅಂದಾಜು ಮೊತ್ತವನ್ನು ರೂ.15.00ಲಕ್ಷಕ್ಕೆ ಬದಲಾಗಿ ರೂ.1.50 ಲಕ್ಷ ಎಂದು ತಪ್ಪಾಗಿ ನಮೂದು ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಉತ್ತರವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಒಮ್ಮೆಗೆ ಅಂದಾಜು ಪಟ್ಟಿ ಅನುಮೋದನೆಯಾಗಿ ಕಾರ್ಯಾದೇಶ ನೀಡಿದ ಮೇಲೆ ಹಣದ ಮಿತಿ ಇರುವುದಿಲ್ಲ; ಆದುದರಿಂದ ಈ ವಿಷಯದಲ್ಲಿ ಯಾವುದೇ ಸಮಸ್ಯೆ/ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು. ಮಾನ್ಯ ಸದಸ್ಯರು ಮುಂದುವರಿದು, ಬಹುಗ್ರಾಮ ಯೋಜನೆಯಡಿ ಮಾರ್ಕೋನಹಳ್ಳಿ, ಕೊತ್ತಗೆರೆ, ಹುತ್ರಿದುರ್ಗ ಹೋಬಳಿ ಮತ್ತು ಯಡವಾಣಿ ಗ್ರಾಮಗಳ ಕಾಮಗಾರಿಗಳ ಕುರಿತು ಮಾಹಿತಿ ಒದಗಿಸುವಂತೆ ಕೋರಿದರು. ಹಾಗೂ ಯಡವಾಣಿ ಮತ್ತು ಮಾರ್ಕೋನಹಳ್ಳಿ ಕಾಮಗಾರಿಗಳು 2014-15ನೇ ಸಾಲಿನಲ್ಲಿ ಅನುಷ್ಠಾನವಾಗಲೇಬೇಕು

ಎಂದು ಒತ್ತಾಯಿಸಿದರು. ಪ್ರತಿಯಾಗಿ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಯಡವಾಣಿಯ ಯೋಜನೆಯನ್ನು withdraw ಮಾಡಲಾಗಿದ್ದು, ಬದಲಾಗಿ ಶಿಂಷಾ ನದಿಯಿಂದ ಯಡವಾಣಿ ಮತ್ತು ಇತರೆ 10 ಗ್ರಾಮಗಳಿಗೆ ಬಹುಗ್ರಾಮ ಯೋಜನೆ ಮಾಡಬಹುದೆಂದು ತಿಳಿಸಿದ್ದರಿಂದ ಸದರಿ ಕಾಮಗಾರಿಯನ್ನು ಈ ಬಾರಿಗೆ ಸೇರಿಸಲಾಗಿದೆ; ಆದರಂತೆ ಈಗ ಯೋಜನೆಯ ರೂಪು-ರೇಷೆ ಸಿದ್ಧಪಡಿಸಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ತಿಳಿಸಲಾಗಿದೆ; ಕೊತ್ತಗೆರೆಯ 10 ಹಳ್ಳಿಗಳಿಗೆ ಡಿ.ಎಸ್.ಆರ್.ಆಗಿದೆ; ಹಾಗೆಯೇ, ಹುತ್ರಿದುರ್ಗ ಕಾಮಗಾರಿಯನ್ನು ಅನುಮೋದನೆಗಾಗಿ ಮುಖ್ಯ ಇಂಜಿನಿಯರ್ ರವರಿಗೆ ಸಲ್ಲಿಸಲಾಗಿದೆ, ಸದರಿ ಪ್ರಸ್ತಾವನೆಯು ಎಸ್.ಎಲ್.ಎಸ್.ಎಸ್.ಸಿ. ಸಮಿತಿಯಲ್ಲಿ ಅನುಮೋದನೆಯಾಗಿ ಬಂದ ನಂತರ ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯ ಅಧಿಕಾರಿಗಳನ್ನು ಕರೆಸಿ ಸಮಾಲೋಚಿಸಿ ಅಗತ್ಯ ಕ್ರಮವಹಿಸುವಂತೆ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು. ಮುಂದುವರಿದು, ಹುತ್ರಿದುರ್ಗದ ಕಾಮಗಾರಿಗೆ ಸಂಬಂಧಿಸಿದಂತೆ ಮಾಗಡಿ-ಹುತ್ರಿದುರ್ಗ ಸೇರಿ ರೂ.260.00ಕೋಟಿ ಮೊತ್ತದ ಕಾಮಗಾರಿಗೆ ಟೆಂಡರ್ ಕರೆದಿದ್ದು, ಅರ್ಜಿ ಸಲ್ಲಿಸಲು ದಿನಾಂಕ 20-10-2014 ಕೊನೆಯ ದಿನವಾಗಿ ರುತ್ತದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಪ್ರತಿಯಾಗಿ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಗ್ರಾಮೀಣ ಕುಡಿಯುವ ನೀರು ವಿಭಾಗದಿಂದ ಟೆಂಡರ್ ಕರೆದಿರುವುದಿಲ್ಲ, ಬಹುಶ: ಹೇಮಾವತಿ ನಾಲಾ ವಲಯದಿಂದ ಟೆಂಡರ್ ಕರೆದಿರಬಹುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಪ್ರತಿ ಪಾಯಿಂಟ್ ನ್ನು ಎಕ್ಸಿಕ್ಯೂಷನ್ ಮಾಡಿ ಸ್ಥಳ ಪರಿಶೀಲಿಸಬೇಕು ಜೊತೆಗೆ ಸಂಬಂಧಪಟ್ಟ ತಾಲ್ಲೂಕುಗಳ ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಕೂರಿಸಿಕೊಂಡು ಸಮಾಲೋಚಿಸಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು; ಹಾಗೆಯೇ, ಜಿಲ್ಲೆಯ ಐದು ಬರಪೀಡಿತ ತಾಲ್ಲುಕುಗಳಿಗೆ (ಕೊರಟಗೆರೆ, ಮಧುಗಿರಿ, ಕುಣಿಗಲ್, ಶಿರಾ ಮತ್ತು ಪಾವಗಡ) ಕುಡಿಯುವ ನೀರಿಗಾಗಿ ಸರ್ಕಾರ ರೂ.1,000/- ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ; ಇದರಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರುಗಳು ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳ ನೆರವು ಪಡೆದು ಕೆಲಸ ಮಾಡಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಉಪಾಧ್ಯಕ್ಷರು, ಪಾವಗಡ ತಾಲ್ಲೂಕಿನಲ್ಲಿ 28 ಆರ್.ಓ.ಪ್ಲ್ಯಾಂಟ್ ಗಳು ಬಾಕಿ ಇದ್ದು, ಈ ಬಗ್ಗೆ ಸಭೆಯಲ್ಲಿ ತೀರ್ಮಾನ ಕೈಗೊಂಡು ಹಾಲಿ ಇರುವ ಗುತ್ತಿಗೆಯನ್ನು ರದ್ದುಪಡಿಸಿ ಬೇರೆಯವರಿಂದ ಕೆಲಸ ಮಾಡಿಸಬೇಕು ಎಂದು ಕೋರಿದರು. ಪ್ರತಿಯಾಗಿ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಗುತ್ತಿಗೆದಾರರಿಂದ ಸಮಸ್ಯೆಯಾಗಿದೆ, ಅವರು 15 ದಿನದಲ್ಲಿ ಸರಿಪಡಿಸದಿದ್ದರೆ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಬೇರೆ ಗುತ್ತಿಗೆದಾರರಿಗೆ ವಹಿಸಲು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು. ಮಾನ್ಯ ಉಪಾಧ್ಯಕ್ಷರು ಮುಂದುವರಿದು, ಕ್ಯಾತಗಾನಹಳ್ಳಿ ಕನಕಾಪುರ, ತಾಳೆಮರದ ಹಳ್ಳಿ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರು ಪೂರೈಕೆಯಾಗಿರುವುದಿಲ್ಲ: ಹಾಗೆಯೇ, gÁå¥ÉÖ ಗ್ರಾಮದಲ್ಲಿ ಮೇಲುತೊಟ್ಟಿ ಕಾಮಗಾರಿ ಪೂರ್ಣಗೊಂಡಿದ್ದು, ಮೋಟಾರು-ಪಂಪು ಅಳವಡಿಸಿ ನೀರು ಕೊಟ್ಟಿಲ್ಲ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸರ್ವೀಸ್/ಕಟ್ಟಡ/ವೋಲ್ಟೇಜ್ ಇತ್ಯಾದಿಗಳ ಬಗ್ಗೆ ಬೆಸ್ಕಾಂ/ಕರ್ನಾಟಕ ಭೂಸೇನಾ ನಿಗಮದವರ ಗಮನಕ್ಕೆ ತರುವಂತೆ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು. ನಂತರ, 139 ಆರ್.ಓ.ಪ್ಲಾಂಟ್ ಗಳ ಪೈಕಿ 10ಕ್ಕೆ ಜಾಗವಿಲ್ಲದೆ substitution ಆಗಿ ಜಾಗ ಕೊಡಲಾಗಿದೆ; 121 ಪ್ಲಾಂಟ್ ಗಳನ್ನು ಅಳವಡಿಸಿದ್ದು, 61 ಪ್ಲಾಂಟ್ ಗಳು ಕೆಲಸ ಮಾಡುತ್ತಿವೆ, 60 ಕೆಲಸ ಮಾಡುತ್ತಿಲ್ಲ; PAN ASIA ಕಂಪನಿಯಿಂದ(ಗುತ್ತಿಗೆದಾರರು) 50 ಪ್ಲಾಂಟ್ ಗಳನ್ನು ಕೊಟ್ಟಿದ್ದು, ಅವು ಕೆಲಸ ಮಾಡದಿದ್ದರೆ ಅವರನ್ನು(PAN ASIA) ಬದಲಿಸಲು ತೀರ್ಮಾನ ಆದೇಶ (Rescind order) ಮಾಡುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ; ಈಗಾಗಲೇ ಮನೆ ಕಟ್ಟಲಾಗಿದ್ದು ಪ್ಲಾಂಟ್ ಅಳವಡಿಸದಿರುವ 12 ಪ್ರಕರಣಗಳು ಬಾಕಿ ಇರುತ್ತವೆ; ಅಂತಹಕಡೆ ತುರ್ತಾಗಿ ಪ್ಲಾಂಟ್ ಅಳವಡಿಸ ಬೇಕು. ಇಂತಹ ಒಟ್ಟು 13(10+3)=13)ಪ್ರಕರಣಗಳ ಪೈಕಿ 6 ಪ್ರಕರಣಗಳು ಪೂರ್ಣಗೊಂಡಿದ್ದು ಉಳಿದ 7 ಪ್ರಕರಣಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಪಾವಗಡ ತಾಲ್ಲೂಕಿನಲ್ಲಿ ಸಮಸ್ಯೆಯಿದ್ದಲ್ಲಿ ಸದರಿ ಪ್ಲಾಂಟ್ ಗಳನ್ನು ಶಿರಾ ತಾಲ್ಲೂಕಿನಲ್ಲಿ ಅಳವಡಿಸಿದಲ್ಲಿ ಚೆನ್ನಾಗಿ ಕೆಲಸ ಮಾಡುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾನ್ಯ ಉಪಾಧ್ಯಕ್ಷರು, ಪಾವಗಡ ತಾಲ್ಲೂಕಿನಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ ಆದರೆ PAN ASIA ಕಂಪನಿಯವರು ಪ್ಲಾಂಟ್ ಗಳನ್ನು ಅಳವಡಿಸಿಲ್ಲ; ಆದ್ದರಿಂದ ಸಮಸ್ಯೆಯಾಗಿದೆ ಎಂದು ಸಮರ್ಥಿಸಿಕೊಂಡರು. ಮುಂದುವರಿದು, ಗ್ರಾಮೀಣ ಕುಡಿಯುವ ನೀರು ಉಪವಿಭಾಗದ ಮಧುಗಿರಿ/ಕೊರಟಗೆರೆ/ಕುಣಿಗಲ್/ಶಿರಾ ಮತ್ತು ಪಾವಗಡ ತಾಲ್ಲೂಕುಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ 20-11-2014 ರೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ತಿಳಿಸಿದರಲ್ಲದೆ, ಒಂದು ವೇಳೆ ಅವರುಗಳು ಸದರಿ ದಿನಾಂಕದೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಅವರ ಗುತ್ತಿಗೆಯನ್ನು ರದ್ದುಪಡಿಸಿ ಬೇರೆಯವರಿಂದ ವ್ಯವಸ್ಥೆಗೊಳಿಸಬೇಕು ಎಂದು ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು.

**(ಕ್ರಮ:-ಕಾ.ಪಾ.ಇಂ.ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು )**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, Terra filter is a technical subject, ಈಗ government policy ಯಂತೆ ಎಲ್ಲ ಕಡೆ water purification plant ಅಳವಡಿಕೆಗೆ NRDWP ಅನುದಾನದಿಂದ ಶೇ.50% ಮತ್ತು ರಾಜ್ಯ ಸರ್ಕಾರದಿಂದ ಶೇ.50% ಹಣ ಪಾವತಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ; ಅದೇ ರೀತಿ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಪ್ರತಿ ಉಪವಿಭಾಗಗಳಲ್ಲಿ 5-6 ಮಂದಿ ಕಿರಿಯ ಇಂಜಿನಿಯರ್ ಗಳಿದ್ದು, ಅವರುಗಳು ಕುಡಿಯುವ ನೀರು, ರಸ್ತೆ, ಕಟ್ಟಡ ಇತ್ಯಾದಿ ಎಲ್ಲ ಕಾಮಗಾರಿ(ಯೋಜನೆ)ಗಳನ್ನು ಉಸ್ತುವಾರಿ ಮಾಡುವುದರಿಂದ ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ ಎಂದು ಆಕ್ಷೇಪಿಸಿದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಗ್ರಾಮೀಣ ಕುಡಿಯುವ ನೀರು ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಇರುವೆಡೆ ಪಂಚಾಯತ್ ರಾಜ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ನೀರು ಪೂರೈಕೆ ಮಾಡುತ್ತಿಲ್ಲ; ಆದರೆ, ಗ್ರಾಮೀಣ ಕುಡಿಯುವ

ನೀರು ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಇಲ್ಲದ ಕಡೆ ಪಂಚಾಯತ್ ರಾಜ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಎರಡೂ ಕಡೆಯ ಕೆಲಸ ಮಾಡಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ; ರೂ.9.00 ಕೋಟಿ ಅಂದಾಜಿನಲ್ಲಿ ರೂ.2.00 ಲಕ್ಷಕ್ಕಿಂತ ಕಡಿಮೆ ಮೊತ್ತದ 1198 ಕಾಮಗಾರಿಗಳು ಹಾಗೂ ರೂ.28.00 ಕೋಟಿ ಅಂದಾಜಿನಲ್ಲಿ ರೂ.2.00 ಲಕ್ಷಕ್ಕೆ ಮೇಲ್ಪಟ್ಟು ರೂ. 5.00ಲಕ್ಷದೊಳಗಿನ 726 ಕಾಮಗಾರಿಗಳು ಮಂಜೂರಾಗಿದ್ದು/ಅನುಮೋದನೆಯಾಗಿದ್ದು, ಈ ಎಲ್ಲಾ ಅನುದಾನ ವನ್ನು ಒಂದು ತಿಂಗಳ ಒಳಗಾಗಿ ವೆಚ್ಚ ಭರಿಸಬೇಕೆಂದು ಸುತ್ತೋಲೆಯಲ್ಲಿ ಹೇಳಲಾಗಿದೆ ಎಂದು ಸಭೆಗೆ ತಿಳಿಸಿದರಲ್ಲದೆ ಅದರಂತೆ, ಈ ವರೆಗೆ ಎಷ್ಟು ಅಂದಾಜುಪಟ್ಟಿಗಳನ್ನು ಅನುಮೋದಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರನ್ನು ಕೇಳಿದರು. ಪ್ರತಿಯಾಗಿ ಗ್ರಾಮೀಣ ಕುಡಿಯುವ ನೀರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಈವರೆಗೆ 980 ಅಂದಾಜುಪಟ್ಟಿಗಳು ಬಂದಿದ್ದು, ಎಲ್ಲಾ 980 ಅಂದಾಜುಪಟ್ಟಿಗಳಿಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಮರೋಪಾದಿಯಲ್ಲಿ ತುಂಡು ಗುತ್ತಿಗೆ ಆಧಾರದಲ್ಲಿ ಶಾಲೆ ಮತ್ತು ಅಂಗನವಾಡಿ ಕಟ್ಟಡಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿ ನಿರ್ವಹಿಸಿ ದಿನಾಂಕ 30-11-2014ರೊಳಗೆ ತುರ್ತಾಗಿ ಪೂರ್ಣಗೊಳಿಸಬೇಕು ಇಲ್ಲವಾದಲ್ಲಿ 4-5 ಮಂದಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಬೇಕಾಗುತ್ತದೆ; ನಾಳೆ ತಾಲ್ಲೂಕುವಾರು ಸಭೆಯಲ್ಲಿ ಅಂದಾಜು ಪಟ್ಟಿ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ತಿಳಿಸಿದರಲ್ಲದೆ ಅಂದಾಜು ಪಟ್ಟಿ ತಯಾರಿಸಿಲ್ಲದವರ ವಿರುದ್ಧ ಕ್ರಮವಹಿಸ ಲಾಗುವುದು ಎಂದು ತಿಳಿಸಿದರು.

**ವಿಷಯ ಸೂಚಿ. 2 : ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಕುರಿತು ಚರ್ಚೆ:-**

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಜಿಲ್ಲೆಯಲ್ಲಿ 82 ಗ್ರಾಮ ಪಂಚಾಯಿತಿಗಳನ್ನು Block ಮಾಡಲಾಗಿರುವ ಹಿನ್ನೆಲೆಯಲ್ಲಿ ಅವುಗಳನ್ನು Unblock ಮಾಡಿಸಲು ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಎಂಬ ಕುರಿತು ಮಾಹಿತಿ ಒದಗಿಸುವಂತೆ ಕೋರಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಎನ್.ಸಿ.ಕಲಾ ರವರು, ದೇವಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಂಪುರ ಗ್ರಾಮದಲ್ಲಿ 2012-13ನೇ ಸಾಲಿನಲ್ಲಿ ಒಂದು ಪಿಕಪ್ ಮತ್ತು 60 ಶೌಚಾಲಯಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಸದರಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಆತ್ಮಹತ್ಯೆ ಮಾಡಿಕೊಂಡರು ಎಂಬ ನೆಪದಿಂದ ಸಂಬಂಧಪಟ್ಟವರಿಗೆ ಈ ವರೆಗೆ ಹಣ ಪಾವತಿಯಾಗಿರುವುದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು, MGNREGA ಯೋಜನೆಯು ಒಂದು ಮಹತ್ವದ ಯೋಜನೆಯಾಗಿದ್ದು, ಈ ಯೋಜನೆಯಡಿ ಸಾಕಷ್ಟು ಕೆಲಸಗಳಾಗಿದ್ದು, ಆಸ್ತಿ ಸೃಜನೆಯಾಗಿರುತ್ತದೆ; ಎಲ್ಲೋ ಒಂದೆರಡು ಕಡೆಗಳಲ್ಲಿ ಕಳಪೆ ಕಾಮಗಾರಿ ಆಗಿರಬಹುದು; ಆಬಗ್ಗೆ ಅಧಿಕಾರಿಗಳು ದೃಢೀಕರಿಸಿ ಕ್ರಮವಹಿಸುತ್ತಾರೆ; ಕೆಲಸದ ಬಗ್ಗೆ ದಾಖಲಾತಿಗಳನ್ನು ಒದಗಿಸಲಾಗದ ಸಂದರ್ಭವು ಹಗರಣಕ್ಕೆ ಕಾರಣವಾಗಿದೆ; (Lapse of Procedure) ಸಂಬಂಧಪಟ್ಟ ತಾಲ್ಲೂಕುಗಳ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಅದನ್ನು ಸರಿಪಡಿಸಬೇಕಾಗಿತ್ತು; ಜಿಲ್ಲಾ ಪಂಚಾಯ್ತಿ ಅಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು

ಹಗಲು-ರಾತ್ರಿ ಕೆಲಸ ಮಾಡಿರುವುದರಿಂದ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ; ಹೀಗಿದ್ದೂ ಕೂಡ ಕೆಟ್ಟ ಹೆಸರು ಬಂದಿದ್ದು ದುರಷ್ಟೃಷ್ಟಕರ ಎಂದು ವಿಷಾಧ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುವುದಿಲ್ಲ; ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕೆಲವರು ಹೊಸದಾಗಿ ಬಂದಿದ್ದಾರೆ, ಕೆಲವರು ಸೇವೆಯಿಂದ ಅಮಾನತ್ತುಗೊಂಡಿದ್ದಾರೆ, ಕಾರ್ಯನಿರ್ವಾಹಕ ಅಧಿಕಾರಿಗಳು ವರ್ಗಾವಣೆಗೊಂಡಿದ್ದಾರೆ; ಆದುದರಿಂದ, ಸಮಸ್ಯೆಯಾಗಿರುವ ಪಂಚಾಯಿತಿಗಳಿಗೆ ಮಾನ್ಯ ಅಧ್ಯಕ್ಷರು, ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಯವರು ಮತ್ತು ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರುಗಳು ಭೇಟಿ ನೀಡಿ ಪರಿಶೀಲಿಸಿ ಕ್ರಮವಹಿಸ ಬೇಕಾಗುತ್ತದೆ; ಆದುದರಿಂದ ಪಂಚಾಯಿತಿ ಭೇಟಿಗೆ ದಿನಾಂಕ ಗೊತ್ತುಪಡಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಇದು ರಾಜ್ಯ ಮಟ್ಟದ ಕುತಂತ್ರವಾಗಿದೆ; ಶಿರಾ ತಾಲ್ಲೂಕು ರಾಮಲಿಂಗಾಪುರ ಗ್ರಾಮ ಪಂಚಾಯಿತಿಯಲ್ಲಿ ಸೋಷಿಯಲ್ ಆಡಿಟ್ ನವರು, ಸದಸ್ಯರಲ್ಲದವರನ್ನು ಅಧ್ಯಕ್ಷರೆಂದು ಮಾಡಿ ಅನಾಯಾಸವಾಗಿ ರೂ. 2.00 ಲಕ್ಷಗಳ ಅವ್ಯವಹಾರ ಎಂದು ಆರೋಪಮಾಡಿರುತ್ತಾರೆ; ಆದುದರಿಂದ ಅಧಿಕಾರಿಗಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು; MGNREGA ಯೋಜನೆ ಎಂದರೆ ಅಧಿಕಾರಿಗಳು ಕರೆಂಟ್ ಹೊಡೆದವರಂತಾಗುತ್ತಾರೆ ಎಂದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ತನಿಖಾ ವರದಿ ನೀಡಿರುವವರು ಸರ್ಕಾರೀ ನೌಕರರೇ? ಅವರು ನೀಡಿರುವ ವರದಿಯ ಆಧಾರದ ಮೇಲೆ ಕ್ರಮ ಜರುಗಿಸಲು ಅವಕಾಶವಿದೆಯೇ? ಎಂದು ಪ್ರಶ್ನಿಸಿದರು. ಈ ಮಾತಿಗೆ ಬೆಂಬಲ ವ್ಯಕ್ತಪಡಿಸಿದ ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಪಿಕಪ್ ಮತ್ತು ದನದ ಕೊಟ್ಟಿಗೆಗಳನ್ನು ಕಟ್ಟಿರುವವರಿಗೆ ಕಾಮಗಾರಿ ಪೂರ್ಣಗೊಂಡಿದ್ದರೂ ಈ ವರೆವಿಗೆ ಹಣ ಪಾವತಿಸಿರುವುದಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕುಣಿಗಲ್ ಇವರು, MGNREGA ಯೋಜನೆಯಡಿ ಕೆಲಸಗಳಾಗಿದ್ದು, ಆಸ್ತಿ ಸೃಜನೆಯಾಗಿರುತ್ತದೆ; ಆದರೆ ನಿಜವಾದ ಕೂಲಿಕಾರರು ಇರದೆ ಎನ್.ಎಂ.ಆರ್. ಜನರೇಟ್ ಆಗಿ ಭರ್ತಿ ಮಾಡುವ ಸಂದರ್ಭದಲ್ಲಿ ಅವ್ಯವಹಾರವಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಎಂ.ಜಿ.ಎನ್.ಆರ್.ಜಿ.ಎ.ಯೋಜನೆಯ ಕುರಿತು ನಿನ್ನೆ ನಡೆದ ತ್ರೈಮಾಸಿಕ ಕೆ.ಡಿ.ಪಿ. ಸಭೆಯಲ್ಲಿ ಚರ್ಚೆಯಾಗಿದೆ; ಈ ಸಾಮಾಜಿಕ ಲೆಕ್ಕ ಪರಿಶೋಧಕರನ್ನು ಸರ್ಕಾರದವರೇ ನೇಮಕ ಮಾಡಿ ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಿಸಿದ್ದಾರೆ; ಮತ್ತೆ ಆ ವರದಿಯ ಮೇಲೆ ಆಯುಕ್ತರು(ಎಂ.ಜಿ.ಎನ್.ಆರ್.ಜಿ.ಎ.) ಕ್ರಮವಹಿಸಿ ಲೆಕ್ಕ ಪರಿಶೋಧನಾ ವರದಿಯಲ್ಲಿದ್ದ ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ವಹಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದ್ದು, ಅದರಂತೆ ಕ್ರಮವಹಿಸಲಾಗಿದೆಯಾದರೂ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಟಾರ್ಗೆಟ್ ಮಾಡಿದ್ದಾರೆ; ಈ ಮೇರೆಗೆ ಎಲ್ಲ ಮಾನ್ಯ ಸದಸ್ಯರುಗಳು ಮಾನ್ಯ ಮಂತ್ರಿಯವರಲ್ಲಿಗೆ ನಿಯೋಗ ಹೋಗಿ ನಂತರ ಎಂ.ಜಿ.ಎನ್.ಆರ್.ಜಿ.ಎ.ಆಯುಕ್ತರನ್ನು ಭೇಟಿ ಮಾಡಲು ನಿನ್ನೆ ನಡೆದ ತ್ರೈಮಾಸಿಕ ಕೆ.ಡಿ.ಪಿ.ಸಭೆಯಲ್ಲಿ ನಿರ್ಣಯವಾಗಿರುತ್ತದೆ; 82 ಪಂಚಾಯಿತಿಗಳಿಗೆ ತೊಂದರೆಯಾಗಿದೆ, ಅದನ್ನು ನಿಲ್ಲಿಸುವ ಶಕ್ತಿ ಇಲ್ಲ, ಆದರೆ ಎಲ್ಲ ಮಾನ್ಯ ಸದಸ್ಯರಗಳು ಮಾನ್ಯ ಸಚಿವರನ್ನು ಭೇಟಿ ಮಾಡಿ, ವಿಚಾರದ ಹಂತದ ಬಗ್ಗೆ ಮರುಪರಿಶೀಲನೆ ಕೈಗೊಳ್ಳುವಂತೆ ಅಭಿಪ್ರಾಯ ತಿಳಿಸಬಹುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, MGNREGA ಯೋಜನೆಯ ಕುರಿತು ಕಳೆದ ಫೆಬ್ರುವರಿಯಿಂದ ಸಾಕಷ್ಟು ಪ್ರತಿಭಟನೆ/ಚರ್ಚೆಗಳು ಆಗಿವೆ; ಕೆಲವರು ವ್ಯವಹಾರ/ಅವ್ಯವಹಾರ ನಡೆದಿದೆ ಎಂದು ºÉÊ¯ÉÊmï ಮಾಡಿದ್ದಾರೆ; ಈಗ MGNREGA ಯೋಜನೆಯಡಿ ಕೆಲಸ ಮಾಡಿರುವ ಕೂಲಿಕಾರರಿಗೆ ಕೂಲಿ ಹಣ ಕೊಡಬೇಕು; ಆದರೆ ಬದಲಾಗಿ ಗುತ್ತಿಗೆದಾರರಿಗೆ / ಯಂತ್ರೋಪಕರಣಗಳಿಗೆ ಹಣ ನೀಡಿದ್ದಾರೆ ಎಂದು ಆರೋಪ ವ್ಯಕ್ತವಾಗುತ್ತಿದೆ; ಈ ಯೋಜನೆಯಡಿ ಕೆಲವು ನ್ಯೂನತೆಗಳಿವೆ. 2013-14 ನೇ ಸಾಲಿನಲ್ಲಿ ಭೌತಿಕವಾಗಿ ಕೆಲಸ ಆಗಿದ್ದು, ಲೆಕ್ಕ ಹಾಕಿ ನೋಡಿದಾಗ ರೂ.170.11ಕೋಟಿ ಹಣ ಖರ್ಚಾಗಿದೆ; ಪ್ರಸಕ್ತ ಸಾಲಿನಲ್ಲಿ ಶೌಚಾಲಯಗಳನ್ನು ನಿರ್ಮಿಸುವಲ್ಲಿ ಈ ವರೆಗೆ ರೂ.4.50 ಕೋಟಿ ಹಣ ಖರ್ಚಾಗಿದೆ. ಪುನಃ ಹಿಂದಿನ ಸಾಲಿನ ಕಾಮಗಾರಿಗಳಿಗೆ ರೂ. 20ಕೋಟಿ ವೆಚ್ಚವಾಗಿದೆ. ಸರಿಯಾದ ಮೇಲುಸ್ತುವಾರಿ ಇಲ್ಲವೆಂಬುದು ಸರ್ಕಾರದ ಆಕ್ಷೇಪಣೆ. ಇಷ್ಟಾದರೂ ಸಮಸ್ಯೆಗಳನ್ನು ಬಗೆ ಹರಿಸಬೇಕಾದರೆ ತಾಲ್ಲೂಕು ಮಟ್ಟದ ತಂಡ ಸರಿಯಾದ ಉತ್ತರ ಕೊಡದಿದ್ದಲ್ಲಿ ಪ್ರಯೋಜನವಾಗುವುದಿಲ್ಲವಾದ್ದರಿಂದ ಮತ್ತೆ ಜವಾಬ್ದಾರಿ ತೆಗೆದುಕೊಂಡು ಮೇಲ್ಮನವಿ ಸಲ್ಲಿಸಲು ಕ್ರಮವಹಿಸಬಹುದಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲರೂ ಆಡಿಟ್ ವರದಿಗಳನ್ನು ಕೂಲಂಕುಷವಾಗಿ ಓದಿ, ಆಕ್ಷೇಪಣೆಗೊಂಡಿರುವ ರೂ.17 ಕೋಟಿಯ ಮೊತ್ತದ 82 ಪಂಚಾಯ್ತಿಗಳ ಕಾಮಗಾರಿಗಳ ಸಂಬಂಧ ಕಾಮಗಾರಿವಾರು (ಕಾಮಗಾರಿ ಆಗಿದೆ/ಆಗಿಲ್ಲ, ಎನ್.ಎಂ.ಆರ್. ಆಗಿದೆ/ಆಗಿಲ್ಲ, ಹಣ ಪಾವತಿಸಲಾಗಿದೆ/ಆಗಿಲ್ಲ ಎಂಬ ಅಂಶಗಳ ಬಗ್ಗೆ) ವರದಿ ಮಾಡಿದರೆ ಸರಿಹೋಗುತ್ತದೆ; ಇಲ್ಲವಾದರೆ ಯಾರಿಗೆ ಶಿಕ್ಷೆಯಾಗುತ್ತದೋ ಗೊತ್ತಿಲ್ಲ; ಪರಿಶೀಲನೆಗೆ ಸಮಿತಿ ರಚನೆ ಮಾಡಲಾಗಿದೆ; ಅವರಿಂದ ವರದಿ ಬಂದಿರುವುದಿಲ್ಲ; ಸಮರ್ಪಕ ದಾಖಲೆಯಿರುವ ಪ್ರಕರಣಗಳನ್ನು ನೀಡಿದಲ್ಲಿ ಅಂತಹವುಗಳನ್ನು ಪಂಚಾಯಿತಿಗಳಲ್ಲಿ unblock ಮಾಡಿಸಬಹುದು; ಫೆಬ್ರುವರಿ ಮಾಹೆಯಲ್ಲಿ ಒಂದೊಂದೇ ದಿನಕ್ಕೆ 15,000-20,000 ಮಾನವ ದಿನಗಳನ್ನು ಎಂ.ಐ.ಎಸ್.ನಲ್ಲಿ ಫೀಡ್ ಆಗಿದೆ ಎಂದು ಸಭೆಗೆ ತಿಳಿಸಿದರಲ್ಲದೆ, ನ್ಯೂನತೆ ಪಟ್ಟಿಯನ್ವಯ ತಪ್ಪಾಗಿರುವುದನ್ನು delete ಮಾಡಿ ಸರಿಯಿರುವುದಕ್ಕೆ ಹಣ ಪಾವತಿಸಲು ವ್ಯವಸ್ಥೆಗೊಳಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಆಕ್ಷೇಪಣೆಗಳನ್ನು ಪ್ರತಿಪಾದಿಸಿ ದೃಢೀಕರಿಸಿ ಕೊಂಡು ಹೋದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ದಿನಾಂಕ 15-11-2014ರಂದು ಮಾನ್ಯ ಮುಖ್ಯ ಮಂತ್ರಿಯವರ ಸಭೆ ಇರುವುದರಿಂದ ಸದರಿ ದಿನಾಂಕಕ್ಕೆ ಮುಂಚಿತವಾಗಿ ತಾಲ್ಲೂಕು ಮಟ್ಟದಿಂದ ವರದಿ ಪಡೆದು ಸರ್ಕಾರಕ್ಕೆ ಉತ್ತರ ಸಿದ್ಧಪಡಿಸಿ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು. ಮಾನ್ಯ ಸದಸ್ಯರು ಮುಂದುವರೆದು, ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಮನ್ಸ್ ಜಾರಿ ಮಾಡಿ , ಒಂದು ಪಂಚಾಯಿತಿಯಲ್ಲಿ 10-15 ಕಡತಗಳಿದ್ದಲ್ಲಿ ದಾಖಲೆಗಳು ಸರಿಯಿರುವ 10 ಕಡತಗಳನ್ನು ಪರಿಗಣಿಸಿ ಸಮರ್ಪಕ ದಾಖಲೆಗಳಿಲ್ಲದ 5 ಕಡತಗಳನ್ನು ಕೈಬಿಡುವಂತೆ ತಿಳಿಸಿದರು.

ಅಂತಿಮವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಇದು ಆಗುವ ಪ್ರಶ್ನೆಯಲ್ಲ; ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಹೋದರೆ ಆಗುವುದಿಲ್ಲ;ಕಡತಗಳು ಹಾಗೂ ದಾಖಲೆಗಳ ಆದಾರದ ಮೇಲೆ ಪರಿಶೀಲಿಸಬೇಕಾಗುತ್ತದೆ. ಇದನ್ನು ಪಿ.ಡಿ.ಓ. ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಮಾಡಲಾಗುವುದಿಲ್ಲ,ಪಕ್ಕ ದಾಖಲೆ ನಿರ್ವಹಿಸಬೇಕಾಗುತ್ತದೆ. ಆದುದರಿಂದ ಪಂಚಾಯಿತಿ ಕಾರ್ಯದರ್ಶಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇಂಜಿನಿಯರ್ ಗಳು ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖಾ ಅಧಿಕಾರಿಗಳು(ಕೃಷಿ, ಸಾಮಾಜಿಕ ಅರಣ್ಯ,ತೋಟಗಾರಿಕೆ ,ಜಲಾನಯನ, AEE ಗಳು,ಇತ್ಯಾದಿ) ಖಾತರಿ (Confidence) ಇದ್ದಲ್ಲಿ ವರದಿ ನೀಡಲಿ, ತದನಂತರ ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**(ಕ್ರಮ:- ಉಪ ಕಾರ್ಯದರ್ಶಿ(C©üªÀÈ¢Þ),ಜಿಲ್ಲಾ ಪಂಚಾಯತ್ ತುಮಕೂರು.)**

**ವಿಷಯ ಸೂಚಿ. 3 : ವಿವಿಧ ವಸತಿ ಯೋಜನೆ ಹಾಗೂ ನಿರ್ಮಲ ಭಾರತ ಅಭಿಯಾನ ಯೋಜನೆಯ ಅನುಷ್ಠಾನದ ಪ್ರಗತಿ ಕುರಿತು ಚರ್ಚೆ:-**

ವಿವಿಧ ವಸತಿ ಯೋಜನೆಗಳಡಿ ನಿಗಧಿತ ಗುರಿ, ಕಾಮಗಾರಿ ಅನುಷ್ಠಾನ ಮತ್ತು ಪ್ರಗತಿ ಸಾಧನೆಯ ಕುರಿತು ಯೋಜನಾ ನಿರ್ದೇಶಕರು(ಡಿ.ಆರ್.ಡಿ.ಎ) ಸಭೆಗೆ ಅಂಕಿ-ಅಂಶಗಳನ್ನು ವಿವರಿಸಿದರು. ಹಾಗೆಯೇ, ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ ಸಾಧಿಸಿರುವ ಪ್ರಗತಿಯ ಕುರಿತು ಉಪ ಕಾರ್ಯದರ್ಶಿ (ಅಭಿವೃದ್ಧಿ) ಯವರು ಸಭೆಗೆ ಅಂಕಿ-ಅಂಶಗಳನ್ನು ವಿವರಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, 2010-11ರಿಂದ 2014-15ರ ವರೆಗೆ ಜಿಲ್ಲೆಗೆ ಒಟ್ಟಾರೆ 80,359 ಮನೆಗಳ ಗುರಿ ನಿಗಧಿಯಾಗಿದ್ದು, 2014-15ನೇ ಸಾಲಿಗೆ ಘಟಕ ವೆಚ್ಚ ರೂ. 1.25ಲಕ್ಷದಂತೆ ರೂ.73,68,75,000/- ನಿಗಧಿಯಾಗಿರುತ್ತದೆ; ನಿಗಧಿತ ಗುರಿಯನ್ವಯ ಈ ವರೆಗೆ 48,564 ಮನೆಗಳು ಪೂರ್ಣಗೊಂಡಿದ್ದು, 25,812 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ; ಕಾಮಗಾರಿ ಪ್ರಾರಂಭವಾಗದ ಮನೆಗಳು ಮೂರು ವರ್ಷಗಳಿಂದ ಸೇರಿ ಒಟ್ಟು 4583 ಮನೆಗಳು ಪ್ರಾರಂಬವಾಗಿರುವುದಿಲ್ಲ. ಸರಾಸರಿ 46.50% ಪ್ರಗತಿಯಾಗಿದ್ದು, 50%ಗಿಂತ ಕಡಿಮೆ ಪ್ರಗತಿಯಾಗಿರುತ್ತದೆ; ಹೆಚ್ಚಿನ ಪ್ರಗತಿ ಸಾಧಿಸುವಲ್ಲಿ ಹಿಂದುಳಿದಿರುವುದಕ್ಕೆ ಕಾರಣ ಫಲಾನುಭವಿಯನ್ನು ಆಯ್ಕೆ ಮಾಡುವುದರಿಂದ ಹಣ ಪಾವತಿ ಮಾಡುವವರೆಗೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವುದೇ ಆಗಿದೆ; ಬಸವ ವಸತಿ ಯೋಜನೆಯಡಿ ಕುಣಿಗಲ್, ಶಿರಾ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಹೆಚ್ಚುವರಿ ಗುರಿ ನೀಡಲಾಗಿದೆ; ಆಡಿಟ್ ಅಬ್ಜೆಕ್ಷನ್ ಆಗಿರುವ ಮನೆಗಳನ್ನು ಕಟ್ಟಲಾಗಿದೆ, ಇದಕ್ಕೆ ಹಣ ನೀಡದೆ ಸರ್ಕಾರ ಆಕ್ಷೇಪಣೆ ಮಾಡುತ್ತಿದೆ; ಆದುದರಿಂದ ಹಣ ಬಿಡುಗಡೆ ಮಾಡಲು ಸರ್ಕಾರಕ್ಕೆ ಠರಾವು ಸಲ್ಲಿಸುವ ಮೂಲಕ ಶಿಫಾರಸು ಮಾಡಬೇಕು ಎಂದು ಸಭೆಗೆ ತಿಳಿಸಿದರು. ಮುಂದುವರೆದು, ಮುಂದಿನ ದಿನಗಳಲ್ಲಿ ಮೀಸಲಾತಿ ನಿಗಧಿಪಡಿಸಬೇಕು; ಜಾಗೃತಿ ಸಮಿತಿ ಸಭೆ ನಡೆಸಿ ಫಲಾನುಭವಿಗಳ ಆಯ್ಕೆ ಅನುಮೋದನೆಯಾಗಿರುತ್ತದೆ; ಆಗಸ್ಟ್ ಮಾಹೆಯಲ್ಲಿ ಹೆಚ್ಚುವರಿ ಮನೆಗಳನ್ನು ಕೊಟ್ಟ ಸಂದರ್ಭದಲ್ಲಿ ನಿರ್ಬಂಧ ವಿಧಿಸಲಾಗಿರುತ್ತದೆ; ಆದರೆ ದಿನಾಂಕ 05-09-2014ರಲ್ಲಿ ಮತ್ತೊಂದು ಆದೇಶ ನೀಡಿರುತ್ತಾರೆ; ಇದರ ಮರುಪರಿಶೀಲನೆಗೆ ಸರ್ಕಾರಕ್ಕೆ ಠರಾವು ಸಲ್ಲಿಸಬೇಕು ಎಂದು ಒತ್ತಾಯಿಸಿದರು.

**( ಕ್ರಮ:- ಯೋಜನಾ ನಿರ್ದೇಶಕರು ,ಜಿಲ್ಲಾ ಪಂಚಾಯತ್ ತುಮಕೂರು.)**

**ವಿಷಯ ಸೂಚಿ. 4 : ತಾಲ್ಲೂಕು ಪಂಚಾಯಿತಿಗಳ ಕ್ರಿಯಾ ಯೋಜನೆ ಪರಿಶೀಲನೆಯಲ್ಲಿ ಜಿಲ್ಲಾ ಪಂಚಾಯತ್ ಅಸ್ಪಷ್ಟತೆ ಕುರಿತು ಚರ್ಚೆ:-**

ಮಾನ್ಯ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ, ತುಮಕೂರು, ಇವರು ಮಾತನಾಡಿ, ತಾಲ್ಲೂಕು ಪಂಚಾಯಿತಿಗಳ ಕ್ರಿಯಾ ಯೋಜನೆಯನ್ನು ಪರಿಶೀಲನೆಗಾಗಿ ಜಿಲ್ಲಾ ಪಂಚಾಯತ್ ಗೆ ಸಲ್ಲಿಸಲಾಗಿದ್ದು, ಅನುಮೋದನೆ ತಡವಾಗಿದ್ದು, ಕಳೆದ ಮೂರು ತಿಂಗಳುಗಳಿಂದ ಕೆಲಸ ಆಗಿಲ್ಲ; ಇದರಿಂದ ಅನುದಾನ ಸರ್ಕಾರಕ್ಕೆ ವಾಪಸ್ ಹೋಗುತ್ತದೆ; ಆದುದರಿಂದ ಕ್ರಿಯಾ ಯೋಜನೆಗಳನ್ನು ಜಾಗ್ರತೆಯಾಗಿ ಪರಿಶೀಲನೆ ಮಾಡಿಸಿಕೊಡಬೇಕು ಎಂದು ಕೋರಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಕ್ರಿಯಾ ಯೋಜನೆ ತಾಲ್ಲುಕು ಪಂಚಾಯಿತಿ ಹಂತದಲ್ಲಿಯೇ ಅನುಮೋದನೆಯಾಗಿದೆ; ಪರಿಶೀಲನೆಗಾಗಿ ಜಿಲ್ಲಾ ಪಂಚಾಯತ್ ಗೆ ಸಲ್ಲಿಸಲಾಗಿದ್ದು, ಪರಿಶೀಲನೆ ಮಾಡಿಸಿಕೊಂಡು ನಿರ್ಣಯ ಅಂಗೀಕರಿಸಿಕೊಂಡು ಕೆಲಸ ಪ್ರಾರಂಭ ಮಾಡಬಹುದು ಎಂದು ತಿಳಿಸಿದರು.

**ವಿಷಯ ಸೂಚಿ. 5 : ಆಧುನಿಕ ಕೃಷಿ/ತೋಟಗಾರಿಕೆ ಬೇಸಾಯದ ಪ್ರಗತಿ ಕುರಿತು ಚರ್ಚೆ:-**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಬೆಳೆ ನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ, **Insured / Premium / Assured & released** ಕುರಿತು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳಿಂದ ಸಮರ್ಪಕ ಮಾಹಿತಿ ಪಡೆದುಕೊಂಡರು. ನಂತರ, ಲಿಂಕ್ ಡಾಕ್ಯುಮೆಂಟ್ ನಲ್ಲಿ ಜೈವಿಕ ಅನಿಲಕ್ಕೆ ರೂ.48.00ಲಕ್ಷ ಅನುದಾನ ನಿಗಧಿಯಾಗಿದೆ Bio-diversityಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಅದಕ್ಕೆ ಹೆಚ್ಚಿನ ಒತ್ತು ನೀಡಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಈ ವರ್ಷದಿಂದಲೇ ಮಾಡಬಹುದು; ಜೊತೆಗೆ ಮೇ-ಜೂನ್ ಮಾಹೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ರೈತರ ಕಾರ್ಯಾಗಾರವನ್ನು 50 ಹೋಬಳಿಗಳಲ್ಲಿ ಆಯೋಜಿಸಲಾಗುವುದರಿಂದ ಇಂದಿನಿಂದಲೇ ಅದಕ್ಕೆ ಯೋಜನೆ ರೂಪಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ತಾಲ್ಲೂಕುವಾರು ಸಾವಯವ ಕೃಷಿ ಮಾಹಿತಿ ನೀಡುವಂತೆ ಕೋರಿದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು, 40 ಹೋಬಳಿಗಳಲ್ಲಿ ಈ ಕೃಷಿ ಮಾಡಲಾಗುತ್ತಿದೆ; ಜಾನುವಾರು ಸಾವಯವ ಕಡಿಮೆಯಾಗಿರುವುದರಿಂದ ಜೈವಿಕ ಸಾವಯವ ಬಳಸಿ ಕೃಷಿ ಮಾಡಲು ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಮಾಡಲಾಗುತ್ತಿದೆ, ರೈತರಿಗೆ ಸಹಾಯಧನ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ನಂತರ ಮಾನ್ಯ ಸದಸ್ಯರು, ಫಲಾನುಭವಿಗಳ ಆಯ್ಕೆಗೆ ಮಾರ್ಗಸೂಚಿ ಏನು? ಎಂದು ಕೇಳಿದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು, ಮಾರ್ಗಸೂಚಿ ಪ್ರಕಾರ ಮಾನ್ಯ ಅಧ್ಯಕ್ಷರು ಮತ್ತುಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರು ಕ್ಷೇತ್ರ ಭೇಟಿ ಮಾಡಿ ರೈತರ ಹೊಲಕ್ಕೆ ಭೇಟಿ ನೀಡಿ ಕೃಷಿ ಹೊಂಡಕ್ಕೆ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸಿದ ನಂತರ ಆಯ್ಕೆಯನ್ನು ಅಂತಿಮಗೊಳಿಸಲಾಗುತ್ತದೆ ಎಂದು ತಿಳಿಸಿ, ಮಾರ್ಗಸೂಚಿಯ ಅಂಶಗಳನ್ನು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ, ಸಾವಯವ ಗೊಬ್ಬರ ಮಾರಾಟದ ಬಗ್ಗೆ ರೈತ ಸಂಪರ್ಕ ಕೇಂದ್ರಗಳಲ್ಲಿ ಬ್ರೋಚರ್ ಗಳನ್ನು ಮಾಡಿ, ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಪತ್ರ ಬರೆದು, ಸದರಿ ಬ್ರೋಚರ್ ಗಳನ್ನು ರೈತರಿಗೆ ಕೊಡುವ ವ್ಯವಸ್ಥೆಯಾಗಬೇಕು ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಈಗಾಗಲೇ ವ್ಯವಸ್ಥೆಗೊಳಿಸಿರುವುದಾಗಿ ಜಂಟಿ ನಿರ್ದೇಶಕರು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಕೃಷಿ ವಿಶೇಷ ಯೋಜನೆಯ ಬಗ್ಗೆ ಸದಸ್ಯರಿಗೆ ಮಾಹಿತಿ ಇದ್ದರೆ ರೈತರಿಗೆ ತಿಳಿಸಬಹುದು; ಆದುದರಿಂದ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಮಾಹಿತಿ ನೀಡಬೇಕು ಎಂದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು, ಸದರಿ ಕಾರ್ಯಕ್ರಮದಡಿ ಇಲಾಖೆ ವತಿಯಿಂದ 15197 ಅರ್ಜಿಗಳನ್ನು ಈ ವರೆಗೆ ನೀಡಲಾಗಿದ್ದು, 9387 ಅರ್ಜಿಗಳು ಸ್ವೀಕೃತವಾಗಿರುತ್ತವೆ ಎಂದು ತಿಳಿಸಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು, ಹೋಬಳಿ ಮಟ್ಟದಲ್ಲಿ ಕೃಷಿ ಅಧಿಕಾರಿ, ತೋಟಗಾರಿಕಾ ಸಹಾಯಕ ನಿರ್ದೇಶಕರು ಮತ್ತು ರೇಷ್ಮೆ ಸಹಾಯಕ ನಿರ್ದೇಶಕರ ತಂಡ ಅಸ್ತಿತ್ವದಲ್ಲಿದೆ; ಈ ತಂಡದಿಂದ ಯಾವುದೇ ಫಲಾನುಭವಿ ಅನರ್ಹ ಎಂದು ಬಂದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸುವುದಿಲ್ಲ; ಅರ್ಜಿ ಸಲ್ಲಿಸಲು ನಾಳೆಯೇ ಕೊನೆಯ ದಿನವಾಗಿರುತ್ತದೆ; ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಕ್ಷೇತ್ರ ಭೇಟಿ ಮಾಡಲಾಗುವುದು; ಮಾರ್ಗ ಸೂಚಿ ಗೊತ್ತಿಲ್ಲದೆ ಅರ್ಜಿ ಹಾಕಿದ್ದಲ್ಲಿ ರೈತರ ಸಮಕ್ಷಮ ಅರ್ಜಿ ತಿರಸ್ಕೃತವಾಗುತ್ತದೆ; 10 ತಾಲ್ಲೂಕುಗಳಿಂದ 2000 ಕೃಷಿ ಹೊಂಡ ಮಂಜೂರಾಗಿದೆ Sc/ST ಮತ್ತು ಸಾಮಾನ್ಯ

ವರ್ಗಕ್ಕೆ ಮಾರ್ಗಸೂಚಿ ಪ್ರಕಾರ ರೂ.5.00 ಕೋಟಿ ಮೊತ್ತದ ಕೆಲಸವಾಗಿದೆ; ತಂಡದವರು ಗ್ರಾಮವಾರು ಕ್ಷೇತ್ರ ಭೇಟಿ ಮಾಡುತ್ತಾರೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಕುಣಿಗಲ್ ತಾಲ್ಲೂಕಿಗೆ 200 ಗುರಿ ನಿಗಧಿಯಾಗಿ, 2000ಅರ್ಜಿಗಳು ಬಂದು ಎಲ್ಲಾ ಫಲಾನುಭವಿಗಳೂ ಅರ್ಹರಾಗಿದ್ದಲ್ಲಿ ಏನು ಮಾಡುತ್ತೀರಿ? ಎಂದು ಪ್ರಶ್ನಿಸಿದರು. ಪ್ರತಿಯಾಗಿ ತೋಟಗಾರಿಕಾ ಉಪನಿರ್ದೇಶಕರು, As per seniority of over all state ತುಮಕೂರು ಜಿಲ್ಲೆಗೆ ಲಾಟರಿ ಕ್ರಮ ಬೇಕಿಲ್ಲ; ಜಿಲ್ಲಾ ಕೋಟಾ ಮುಗಿದಿದೆ; SC/ST ಕೋಟಾ ಮುಂದಿನ ವಾರ ತಿಳಿಯುತ್ತದೆ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಜಂಟಿ ಕೃಷಿ ನಿರ್ದೇಶಕರು, ಪ್ರಸಕ್ತ ಸಾಲಿನಲ್ಲಿ ಮಂಜೂರಾಗದೇ ಉಳಿದ ಅರ್ಜಿಗಳ ಸಂಬಂಧ Seniorityಯು ಮುಂದಿನ ವರ್ಷಕ್ಕೆ continue ಆಗುತ್ತದೆ ಎಂದು ಸಭೆಗೆ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷರೊಬ್ಬರು, ಕೃಷಿ ಭಾಗ್ಯ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಮಾಡುವಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳು ಬೇಡವೆ? ಅಧಿಕಾರಿಗಳೇ ಆಯ್ಕೆ ಮಾಡುತ್ತಾರೆಯೆ? ಎಂದು ಪ್ರಶ್ನಿಸಿ, ಜಂಟಿ ಕೃಷಿ ನಿರ್ದೇಶಕರು ಮಾರ್ಗಸೂಚಿಯನ್ನು ಸರಿಯಾಗಿ ತಿಳಿಸುತ್ತಿಲ್ಲ ಎಂದು ಆಕ್ಷೇಪಿಸಿದರು. ಮಾನ್ಯ ಅಧ್ಯಕ್ಷರು, ಅಧಿಕಾರಿಗಳ ಜೊತೆ ಚುನಾಯಿತ ಪ್ರತಿನಿಧಿಗಳನ್ನೂ ಕರೆದು ತಿಳುವಳಿಕೆ ನೀಡಿದರೆ ಅನುಕೂಲವಾಗುತ್ತದೆಯಾದ್ದರಿಂದ ಈ ಕುರಿತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಕಾರ್ಯಕ್ರಮಗಳ ಪ್ರಚಾರಕ್ಕೆಂದೇ ಸರ್ಕಾರ ಹಣ ನೀಡುವುದರಿಂದ, ಕಾರ್ಯಕ್ರಮಗಳ ವ್ಯಾಪಕ ಪ್ರಚಾರಕ್ಕೆ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸರ್ಕಾರ ಸುವರ್ಣ ಭೂಮಿ ಯೋಜನೆಯಡಿ ರೈತನ ಖಾತೆಗೆ ರೂ.5,000/- / ರೂ.10,000/- ಹಣ ಜಮೆ ಮಾಡುತ್ತಿದೆ; ಈ ವರ್ಷ ಬರಪೀಡಿತ ಜಾಗದಲ್ಲಿ ಕೃಷಿಹೊಂಡ ಮಾಡಲು ವ್ಯಾಪಕ ಪ್ರಚಾರ ಆಗದಿದ್ದರೆ ಪ್ರಯೋಜನವಾಗುವುದಿಲ್ಲ; ಇನ್ನು ಮುಂದೆ ಈ ರೀತಿ ಆಗದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ; ಅಲ್ಲದೆ, ಯಾವುದೇ ಹೊಸ ಯೋಜನೆಯ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರಿಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಮಾಹಿತಿ ಒದಗಿಸಲು ವ್ಯವಸ್ಥೆ ಮಾಡಲಾಗುವುದು; ಯಾರೂ ಆತಂಕ ಪಡುವ ಅಗತ್ಯವಿಲ್ಲ; ಈಗಾಗಲೇ ರೈತಸಂಪರ್ಕ ಕೇಂದ್ರದಿಂದ ಕರಪತ್ರಗಳನ್ನು ಹೊರಡಿಸಿ ಪ್ರಚಾರ ಮಾಡಲಾಗಿದೆ; 15197 ಅರ್ಜಿಗಳು ಕಳೆದ ವಾರದಲ್ಲಿಯೇ ಬಂದಿವೆ; ಅಂತಿಮ ದಿನಾಂಕವನ್ನು ಸರ್ಕಾರ 30-10-2014ಕ್ಕೆ ವಿಸ್ತರಿಸಿದೆ; ಮಾನ್ಯ ಸದಸ್ಯರುಗಳ ಗಮನಕ್ಕೆ ತಂದಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬರುತ್ತಿದ್ದವು; ಸರ್ಕಾರದ ಆದೇಶದನ್ವಯ ಆಯ್ಕೆ ಮೀಸಲಾತಿ ನಿಗಧಿಯಾಗಿರುತ್ತದೆ; ಅದರಂತೆ, ಪ್ರತಿ ತಾಲ್ಲೂಕಿಗೆ 200 ಫಲಾನುಭವಿಗಳ ಮಿತಿ ನಿಗಧಿಯಾಗಿರುತ್ತದೆ; Lot ನಲ್ಲಿ ಹಿಂದೆ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿತ್ತು; ಈಗ ಸರ್ಕಾರ, ಜೇಷ್ಠತೆಗನುಗುಣವಾಗಿ ಅರ್ಜಿಗಳನ್ನು (then & there only) ತಂಡದ ಮೂಲಕ ಪರಿಶೀಲಿಸಿ ಮಾನದಂಡ ಹಾಕಿಕೊಡಲು ನಿರ್ದೇಶನ ನೀಡಿರುತ್ತದೆ; ಇನ್ನು ಪ್ರಚಾರದ ವಿಚಾರವಾಗಿ, ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಪಾರದರ್ಶಕವಾಗಿರಬೇಕು ಎಂದು ಸಭೆಗೆ ತಿಳಿಸಿದರಲ್ಲದೆ, ಮಾರ್ಗಸೂಚಿಯ

ಒಂದು ಪ್ರತಿಯನ್ನು ಎಲ್ಲ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಸಲ್ಲಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು, ತೆಂಗಿನ ಪುನಶ್ಚೇತನ ಕಾರ್ಯಕ್ರಮದ ಕುರಿತು ತೋಟಗಾರಿಕಾ ಉಪನಿರ್ದೇಶಕರಿಂದ ಸ್ಪಷ್ಟ ಮಾಹಿತಿ ಪಡೆದುಕೊಂಡರು. ನಂತರ ಉಪ ನಿರ್ದೇಶಕರು ಮುಂದುವರೆದು, ಕ್ರಿಯಾ ಯೋಜನೆ ಪೂರ್ಣ ಅನುಮೋದನೆಯಾಗಿದ್ದು, ಪ್ರತಿ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ತರಬೇತಿ ನೀಡಲು ಎಲ್ಲ ಸಹಾಯಕ ತೋಟಗಾರಿಕಾ ನಿರ್ದೇಶಕರುಗಳಿಗೆ ತಿಳಿಸಲಾಗಿದೆ; 200 ಹೆ. ತೆಂಗು ಪುನಶ್ಚೇತನಗೊಳಿಸಲು ರೂ.200.00 ಅನುದಾನ ಬಿಡುಗಡೆಯಾಗಿದೆ; ಜಿಲ್ಲೆಯಲ್ಲಿ ಒಟ್ಟಾರೆ 1,45,000 ತೆಂಗಿನ ಮರಗಳಿವೆ; ತೆಂಗು ಪುನಶ್ಚೇತನ ಕಾರ್ಯಕ್ರಮದಡಿ ಒಂದು ಹೆಕ್ಟೇರಿನಲ್ಲಿ ಒಣಗಿರುವ 10 ಗಿಡ ಬದಲಿಸಿ ಪಾತಿ ಮಾಡಲು ಅವಕಾಶವಿದೆ; ಅದರಂತೆ ಒಬ್ಬ ರೈತನಿಗೆ ಗರಿಷ್ಟ 20 ಗಿಡಗಳು ಹಾಗೂ ಗರಿಷ್ಟ 2 ಹೆಕ್ಟೇರಿಗೆ ಅವಕಾಶವಿದೆ; ಈ ಕುರಿತು ಚಿಕ್ಕಮಗಳೂರಿಗೆ ನಿಗಧಿಯಾಗಿದ್ದ ಅನುದಾನವನ್ನೂ ತುಮಕೂರು ಜಿಲ್ಲೆಗೇ ನೀಡಿದ್ದಾರೆ; ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಸಾಮಾನ್ಯ ವರ್ಗಗಳಿಂದ ಒಟ್ಟಾರೆ 990 ಹೆಕ್ಟೇರ್ ನಲ್ಲಿ ತೆಂಗು ಪುನಶ್ಚೇತನ ಮಾಡಲು ಅವಕಾಶವಿದೆ; ಈ ಹಿನ್ನೆಲೆಯಲ್ಲಿ ರೂ.2.50ಲಕ್ಷ ಹಣ ಖರ್ಚಾದರೆ ಸರ್ಕಾರ ರೂ.10.00 ಲಕ್ಷ ಹಣ ಕೊಡುತ್ತದೆ; ಈ ಕುರಿತು ವ್ಯಾಪಕ ಪ್ರಚಾರಕ್ಕೆ ಸೂಚನೆ ನೀಡಲಾಗಿದೆ; ಈ ವಾರ ಪೂರ್ತಿ ನಿರಂತರ ಸಭೆಗಳ ಕಾರಣ ಕಛೇರಿಯಲ್ಲಿರಲು ಸಾಧ್ಯವಾಗಿಲ್ಲದಿರುವುದರಿಂದ ಸೋಮವಾರದಿಂದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಗಳಿಗೆ ತಿಳಿಸಲಾಗುವುದು ಎಂದು ಸಭೆಗೆ ತಿಳಿಸಿದರಲ್ಲದೆ, ಪ್ರಸ್ತುತ ವೀಳ್ಯಾದೆಲೆ ಪುನಶ್ಚೇತನ ಕಾರ್ಯಕ್ರಮದಡಿ ಜಿಲ್ಲೆಯ ಒಟ್ಟಾರೆ 65 ಹೆಕ್ಟೇರ್ ಪ್ರದೇಶದಲ್ಲಿ ವೀಳ್ಯಾದೆಲೆ ಪುನಶ್ಚೇತನಕ್ಕಾಗಿ ರೂ.13.00 ಲಕ್ಷ ಹಣ ಬಿಡುಗಡೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ತೋಟಗಾರಿಕೆ ಬೆಳೆಗಾರರು ತೆಂಗು ಸುಲಿಯುವ ಮತ್ತು ಅಡಿಕೆ ಸುಲಿಯುವ ಯಂತ್ರ ಇತ್ಯಾದಿ ಯಂತ್ರಗಳನ್ನು ಕೊಳ್ಳಲು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕನಿಷ್ಟ 15% ನಿಂದ ಗರಿಷ್ಟ ರೂ.50,000/- ಸಹಾಯಧನ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಜಿಲ್ಲಾಮಟ್ಟದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆ, ಮೀನುಗಾರಿಕೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಯೇ ಕಾರ್ಯಗಾರವನ್ನು ನಡೆಸುವುದಾಗಿ ಸಭೆಗೆ ತಿಳಿಸಿದರು. ಪೂರಕವಾಗಿ, ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕಾರ್ಯಾಗಾರವನ್ನು ಜಿಲ್ಲಾ ಪಂಚಾಯತ್ ಗೆ ಬದಲಾಗಿ ಬೇರೆ ಊರಿನಲ್ಲಿ ಅಂದರೆ ಶಿರಾ ತಾಲ್ಲೂಕಿನ ಚಿಕ್ಕನಹಳ್ಳಿ ಅಥವಾ ಕುಣಿಗಲ್ ತಾಲ್ಲೂಕಿನ ಮಾರ್ಕೋನಹಳ್ಳಿಯಲ್ಲಿ ನಡೆಸುವಂತೆ ಕೋರಲಾಗಿ ಮಾನ್ಯ ಅಧ್ಯಕ್ಷರು ಆಗಬಹುದೆಂದರು. ಮಾನ್ಯ ಸದಸ್ಯರು ಮುಂದುವರೆದು, ಮೇಲೆ ತಿಳಿಸಿದ ಎಲ್ಲ ಇಲಾಖೆಗಳಡಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ ನವೆಂಬರ್ ಮಾಸಾಂತ್ಯದೊಳಗಾಗಿ ಕಾರ್ಯಾಗಾರ ಮಾಡಬೇಕು ಎಂದು ಸುತ್ತೋಲೆ ಹೊರಡಿಸಿ ದಿನಾಂಕ ನಿಗಧಿಪಡಿಸುವಂತೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಹುಲಿಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 200 ಹೆಕ್ಟೇರ್ ಪ್ರದೇಶದ ದಾಳಿಂಬೆ ಬೆಳೆಗೆ ತಗುಲಿರುವ ಹುಳು ನಿಯಂತ್ರಣಕ್ಕೆ ಮತ್ತು ಹಾಲಿ ಸಂಭವಿಸಿರುವ ದಾಳಿಂಬೆ ಬೆಳೆ ನಷ್ಟ ಪರಿಹಾರಕ್ಕೆ ಸರ್ಕಾರಕ್ಕೆ ಠರಾವು ಕಳುಹಿಸಬೇಕೆಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು, ಅಡಿಕೆ, ದಾಳಿಂಬೆ ಮತ್ತು ದ್ರಾಕ್ಷಿ ಬೆಳೆಗಳಿಗೆ ಮಾರುಕಟ್ಟೆ ದರ ಕುಸಿತವಾಗಿದೆ; ಸುಮಾರು ರೂ.1.50 ಕೋಟಿ ಮೊತ್ತದ ತೆಂಗು ಬೆಳೆ ಹಾನಿಯಾಗಿದೆ; ಈ ಅಂಶಗಳ ಕುರಿತು ರಾಜ್ಯದ ಎಲ್ಲಾ ಜಿಲ್ಲೆಗಳ ತೋಟಗಾರಿಕಾ ಉಪನಿರ್ದೇಶಕರುಗಳು ತೋಟಗಾರಿಕಾ ಕೃಷಿ ಆಯೋಗದ ಅಧ್ಯಕ್ಷರ ಗಮನಕ್ಕೆ ಮಾಹಿತಿ ನೀಡಿದ್ದಾರೆ; ಈ ವಿಚಾರ ಮುಖ್ಯ ಮಂತ್ರಿಯವರ ಹಂತದಲ್ಲಿದೆ; ಈ ವರೆಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಶಿರಾ ತಾಲ್ಲೂಕು ವ್ಯಾಪ್ತಿಯಲ್ಲಿ ದಾಳಿಂಬೆ ಬೆಳೆ ಹುಳು ನಿಯಂತ್ರಣದ ಕುರಿತು ಅಧ್ಯಯನ ನಡೆಸಿ ವರದಿ ನೀಡುವಂತೆಯೂ ಹಾಗೂ ಇಲಾಖಾ ಕಾರ್ಯಕ್ರಮಗಳ ಕುರಿತು ಕರಪತ್ರ ಮುದ್ರಿಸಿ ಎಲ್ಲಾ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಒದಗಿಸುವಂತೆಯೂ ತೋಟಗಾರಿಕಾ ಉಪ ನಿರ್ದೇಶಕರಿಗೆ ತಿಳಿಸಿದರು.

**( ಕ್ರಮ:- ಉ.ನಿ.ತೋಟಗಾರಿಕೆ ಇಲಾಖೆ, ತುಮಕೂರು.)**

ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು, ತುರುವೇಕೆರೆ ತಾಲ್ಲೂಕಿನಲ್ಲಿ ತೆಂಗು ಉತ್ಪಾದಕರ ಸಂಘಗಳು ಅಸ್ತಿತ್ವದಲ್ಲಿದ್ದಾಗ್ಯೂ ಕೂಡ ತೆಂಗು ಅಭಿವೃದ್ಧಿ ಮಂಡಳಿಯವರು (Coconut Board) ಕಂಪನಿಯನ್ನು ಮಾಡಿಕೊಂಡಿದ್ದಾರೆ; ಇದರಿಂದಾಗಿ, ಈಗ ತೋಟಗಾರಿಕೆ ಸವಲತ್ತನ್ನು ತೆಂಗು ಉತ್ಪಾದಕರ ಸಂಘಗಳಿಗೆ ನೀಡದೆ ಕಂಪನಿಗಳಿಗೆ ನೀಡುತ್ತಿದ್ದಾರೆ; ಸದರಿ ಕಂಪನಿಯವರು 150 ತೆಂಗು ಉತ್ಪಾದಕರಿರುವ ಒಂದು ಗ್ರಾಮದಲ್ಲಿ ಎಲ್ಲಾ ತೆಂಗು ಉತ್ಪಾದಕರಿಗೂ ಸವಲತ್ತು ನೀಡದೆ ಕೇವಲ ಅವರ ಕಂಪನಿಯಲ್ಲಿ ಸದಸ್ಯತ್ವ ಹೊಂದಿರುವ 20-30 ಮಂದಿ ತೆಂಗು ಬೆಳೆಗಾರರಿಗೆ ಮಾತ್ರ ಸವಲತ್ತು ನೀಡುತ್ತಾರೆ; ಈ ರೀತಿಯಾದರೆ ಉಳಿದ ತೆಂಗು ಬೆಳೆಗಾರರು ಎಲ್ಲಿ ಹೋಗಬೇಕು?; ಸರ್ಕಾರದ ಸವಲತ್ತು ಹಂಚಿಕೆಯಲ್ಲಿ ಉಳ್ಳವರ ಕಾರುಬಾರಾಗಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಈ ಕೂಡಲೇ ಸದರಿ ಆದೇಶವನ್ನು ಕೈಬಿಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಕೋರಿ, ತೆಂಗು ಅಭಿವೃದ್ಧಿ ಮಂಡಳಿಯಿಂದ ಸವಲತ್ತುಗಳನ್ನು ಕಂಪನಿಗೆ ಬಿಡುಗಡೆ ಮಾಡುವುದನ್ನು ತಪ್ಪಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ತೋಟಗಾರಿಕಾ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆಯ ತೆಂಗು ಪುನಶ್ಚೇತನ ಕಾರ್ಯಕ್ರಮವು CPS ಆಧಾರಿತವಾಗಿದೆ; ಆದರೆ, ಕೇಂದ್ರ ಸರ್ಕಾರದ ಮಟ್ಟದಲ್ಲಿ ತೆಂಗು ಅಭಿವೃದ್ಧಿ ಮಂಡಳಿ ಕೊಚ್ಚಿನ್ ನಲ್ಲಿದೆ; ತೆಂಗು ಬೆಳೆಗಾರರು ಮೊದಲು ತೆಂಗು ಬೆಳೆಗಾರರ ಸಂಘ ಮಾಡಿಕೊಂಡು ನಂತರ ಫೆಡರೇಷನ್ ಮಾಡಿ ತದನಂತರ ಕಂಪನಿ ಮಾಡಬೇಕು ಎಂದು ತೆಂಗು ಅಭಿವೃದ್ಧಿ ಮಂಡಳಿಯ ನಿರ್ದೇಶನವಿದೆ; ಇದು ಪ್ರಥಮವಾಗಿ ತುರುವೇಕೆರೆ ತಾಲ್ಲೂಕಿನಲ್ಲಿ ಪ್ರಾರಂಭವಾಗಿದೆ; ಸರ್ಕಾರದ ಆದೇಶದಂತೆ ಇಲ್ಲಿ ತೆಂಗು ಬೆಳೆಗಾರರಿಗೆ ಬೀಜ, ಸಹಾಯಧನ, ಸಾಲ ಕೊಡಲಾಗುತ್ತದೆ; ಹಾಗೂ ಮೂಲಭೂತ ಸೌಕರ್ಯ ಮತ್ತು ಪರಿಕರಗಳನ್ನು ತೆಂಗುಅಭಿವೃದ್ಧಿ ಮಂಡಳಿ ವತಿಯಿಂದ ನೀಡಲಾಗುತ್ತದೆ; ಇದೂ ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ; ತೆಂಗು ಪುನಶ್ಚೇತನ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುತ್ತದೆ; 40 ಮಂದಿ ತೆಂಗು ಬೆಳೆಗಾರರು ಸೇರಿ ಒಂದು CPS (Coconut Producers Society) ಮಾಡಿ, 100 ಜನ ಸೇರಿ ಫೆಡರೇಷನ್ ಮಾಡಿದರೆ, 100 ಫೆಡರೇಷನ್ ಸೇರಿ ಒಂದು ಕಂಪನಿಯಾಗಿದೆ; ಇಲ್ಲಿ ಪ್ರತಿ ಸವಲತ್ತು ಉಚಿತವಾಗಿ ದೊರೆಯುತ್ತದೆ ಗರಿಷ್ಟ ರೂ. 50.00 ಲಕ್ಷ ಮೊತ್ತದ ವರೆಗೆ ಕೊಡುತ್ತಾರೆ; ಕಂಪನಿ ಹೆಚ್ಚಿದಂತೆ ಸವಲತ್ತುಗಳೂ ಹೆಚ್ಚಿನ ರೀತಿಯಲ್ಲಿ ದೊರೆಯುತ್ತವೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ರೈತರಿಗೆ (ತೆಂಗು ಬೆಳೆಗಾರರಿಗೆ) ಕಂಪನಿಯಿಂದ ಅನ್ಯಾಯವಾಗುತ್ತಿದ್ದು, ಇದನ್ನು ಸರ್ಕಾರದ ಗಮನಕ್ಕೆ ತರಲಾಗುವುದು; ಕೃಷಿ ಇಲಾಖೆಯಡಿ ಬೆಳೆ ವಿಮೆ/ಬೆಳೆ ನಷ್ಟ

ಪರಿಹಾರಕ್ಕೆ ಸಂಬಂಧಿಸಿದಂತೆ, ರೂ. 7.00 ಕೋಟಿ ವಿಮಾ ಹಣ ಕಟ್ಟಿದ್ದು, ರೂ. 113.00 ಕೋಟಿ ಮೊತ್ತಕ್ಕೆ ಬೆಳೆ ವಿಮೆ ಮಾಡಿಸಲಾಗಿದ್ದು, ಈ ವರೆಗೆ ಕೇವಲ ರೂ. 4.90 ಕೋಟಿ ಪರಿಹಾರಧನ ಬಿಡುಗಡೆಯಾಗಿರುತ್ತದೆ ಎಂದು ಸಭೆಗೆ ತಿಳಿಸಿದರಲ್ಲದೆ, ಅಂತೆಯೇ, ತೆಂಗು ಅಭಿವೃದ್ಧಿ ಮಂಡಳಿಯಿಂದ ಸವಲತ್ತುಗಳನ್ನು ಕಂಪನಿಗಳಿಗೆ ನೀಡುತ್ತಿರುವುದರಿಂದ ರೈತರುಗಳಿಗೆ ತೊಂದರೆಯಾಗುತ್ತಿರುವ ಕುರಿತು ಮಾನ್ಯ ಸದಸ್ಯರು (ಶ್ರೀ ಉಗ್ರಯ್ಯ ನವರು) ಲಿಖಿತವಾಗಿ ಮನವಿ ಸಲ್ಲಿಸಿದಲ್ಲಿ ಸರ್ಕಾರದ ಗಮನಕ್ಕೆ ತಂದು ಸಾಧ್ಯವಾಗುವುದಾದರೆ ಅನುಕೂಲ ಮಾಡಿಕೊಡುವುದಾಗಿ ಭರವಸೆಯಿತ್ತರು.

ಅಂತಿಮವಾಗಿ, ರೈತನಿಗಾಗುತ್ತಿರುವ ತೊಂದರೆಯನ್ನು ನಿವಾರಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**( ಕ್ರಮ:- ಉ.ನಿ.ತೋಟಗಾರಿಕೆ ಇಲಾಖೆ, ತುಮಕೂರು.)**

**ವಿಷಯ ಸೂಚಿ. 6 : ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಆಗಿರುವ ಸವಲತ್ತು ದುರುಪಯೋಗದ ಬಗ್ಗೆ ಮಾನ್ಯ ಕೃಷಿ ಸಚಿವರು ಕೈಗೊಂಡಿರುವ ಶಿಸ್ತು ಕ್ರಮದ ಬಗ್ಗೆ:-**

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಚಿ.ನಾ.ಹಳ್ಳಿ ತಾಲ್ಲೂಕಿನ ರಾಮನಹಳ್ಳಿ, ತೀರ್ಥಪುರ, ತಿಮ್ಮನಹಳ್ಳಿ ಗ್ರಾಮಗಳನ್ನು ಕಾರ್ಯಕ್ರಮ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗಿದ್ದು, ಆಯ್ಕೆಯಾಗಿ ಒಂದು ವರ್ಷ ಕಳೆದರೂ ಈ ವರೆಗೆ ಸಣ್ಣ-ಪುಟ್ಟ ಕೆಲಸ ಸಹ ಆಗಿರುವುದಿಲ್ಲ; ಕೇಳಲಾಗಿ, ಕೃಷಿ ಮತ್ತು ಜಲಾನಯನ ಇಲಾಖೆಗಳು ವಿಲೀನಗೊಂಡಿವೆ ಎಂದು ಹೇಳುತ್ತಾರೆ; ಆದರೆ ಈ ವರೆಗೆ ಚಿಕ್ಕ ಕೆಲಸವೂ ಸಹ ಆಗಿರುವುದಿಲ್ಲ ಎಂದು ಆಕ್ಷೇಪಿಸಿದರು.

ಮಾನ್ಯ ಅಧ್ಯಕ್ಷರು, ಜಿಲ್ಲಾ ಜಲಾನಯನ ಇಲಾಖೆಯ ಯೋಜನೆಗಳಡಿ ಸಾಕಷ್ಟು ಅವ್ಯವಹಾರವಾಗಿದೆ ಎಂದು ಆಕ್ಷೇಪಿಸಿ, ಅಧಿಕಾರಿಗಳು ಅಲ್ಪ-ಸ್ವಲ್ಪ ಮಟ್ಟಿಗಾದರೂ ಮನುಷ್ಯತ್ವ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ತಿಳಿಸಿದರು.

**ವಿಷಯ ಸೂಚಿ 7 :- ಜಿಲ್ಲಾ ಪಂಚಾಯತ್ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.**

**a) ದಿನಾಂಕ:30-09-2014ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾನ್ಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ:30-09-2014ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**b) ದಿನಾಂಕ: 07-10-2014ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 07-10-2014 ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಅಕ್ಷರ ದಾಸೋಹ ಕಾರ್ಯಕ್ರಮದಡಿ 2000 ಕ್ವಿಂಟಾಲ್ ಎತ್ತುವಳಿ ಮಾಡದೆ ಕರ್ತವ್ಯ ಲೋಪ ಎಸಗಿರುವ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಮತ್ತು ಉಗ್ರಾಣ ಪಾಲಕರ ವಿರುದ್ಧ ಪೂರ್ಣಪ್ರಮಾಣದಲ್ಲಿ ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಉಳಿದಂತೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**( ಕ್ರಮ:- ಶಿಕ್ಷಣಾಧಿಕಾರಿ,ಅಕ್ಷರ ದಾಸೋಹ, ತುಮಕೂರು.)**

**c) ದಿನಾಂಕ: 10-10-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 10-10-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು.

**d) ದಿನಾಂಕ: 13-10-2014ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ 13-10-2014 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**e) ದಿನಾಂಕ: 13-10-2014ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 13-10-2014ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು.

**ವಿಷಯ ಸೂಚಿ 8 :- ದಿನಾಂಕ : 12-08-2014 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನುಪಾಲನ ವರದಿ ಬಗ್ಗೆ.**

ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಹೇಮಾವತಿ ನೀರು ಹರಿಸುವ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದ್ದಾಗ್ಯೂ ಕಾಮಗಾರಿ ಈವರೆಗೆ ಪೂರ್ಣಗೊಂಡಿರುವುದಿಲ್ಲ; ಪೈಪ್ ಲೈನ್ ಕೆಲಸ ಶೇ.80%ರಷ್ಟು ಮಾತ್ರ ಆಗಿದ್ದು, ಇನ್ನೂ 20% ಕೆಲಸ ಬಾಕಿ ಇರುತ್ತದೆ; ಎರಡು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡುವುದಾಗಿ ಹೇಮಾವತಿ ನಾಲಾವಲಯದ ಅಧಿಕಾರಿಗಳು ಕಳೆದ ಸಾಮಾನ್ಯ ಸಭೆಯಲ್ಲಿ ತಿಳಿಸಿದ್ದರು, ಆದರೆ ಕೆಲಸ ಆಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಹೇಮಾವತಿ ನೀರಿನ ವಿಚಾರವಾಗಿ ದಿನಾಂಕ 29-10-2014ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಕೆ.ಡಿ.ಪಿ.ಸಭೆಯಲ್ಲಿ ಸಮಗ್ರವಾಗಿ ಚರ್ಚೆಯಾಗಿದ್ದು, ಈಗಾಗಲೇ 8 ಟಿ.ಎಂ.ಸಿ ನೀರನ್ನು ಪಡೆದಿರುವುದರಿಂದ ಉಳಿದ 17 ಟಿ.ಎಂ.ಸಿ.ನೀರನ್ನು ಎರಡು ಹಂತದಲ್ಲಿ ಫೆಬ್ರುವರಿ 15ರೊಳಗೆ ತುಂಬಿಸಲು ತೀರ್ಮಾನವಾಗಿದೆ ಎಂದು ಸಭೆಗೆ ತಿಳಿಸಿದರಲ್ಲದೆ, ಹೇಮಾವತಿ ಯೋಜನೆಯ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದುದರಿಂದ ಸದರಿ ಸಂಬಂಧಪಟ್ಟ ಅಧಿಕಾರಿಯವರಿಗೆ ನೋಟೀಸ್ ಜಾರಿ

ಮಾಡಿ ವಿವರಣೆ ಪಡೆಯಲು ಕೋರಿ ಸರ್ಕಾರಕ್ಕೆ ಪತ್ರ ಬರೆಯುವಂತೆ ಉಪ ಕಾರ್ಯದರ್ಶಿ(ಆಡಳಿತ)ರವರಿಗೆ ತಿಳಿಸಿದರು.

1) ( ಕ್ರಮ:- ಉ.ಕಾ(ಆಡಳಿತ),ಜಿಲ್ಲಾ ಪಂಚಾಯತ್ ತುಮಕೂರು.)
2) (ಕ್ರಮ:-ಮುಖ್ಯ ಇಂಜಿನಿಯರ್,ಹೇಮಾವತಿ ನಾಲಾವಲಯ,ತುಮಕೂರು)

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಮಾರ್ಕೋನಹಳ್ಳಿ-ಎಡೆಯೂರು ಬಹುಗ್ರಾಮ ಯೋಜನೆಯು 2012ರಲ್ಲಿಯೇ ಮುಗಿಯಬೇಕಾಗಿದ್ದು, 2014ರ ವರ್ಷಾಂತ್ಯ ಸಮೀಪಿಸುತ್ತಿದ್ದರೂ ಈ ವರೆಗೆ ಕಾಮಗಾರಿ ಪೂರ್ಣಗೊಂಡಿರುವುದಿಲ್ಲವೆಂದು ಆಕ್ಷೇಪಿಸಿದರು.ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಕುಣಿಗಲ್ ಇವರು, 2014ರ ಡಿಸೆಂಬರ್ ಮಾಸಾಂತ್ಯದೊಳಗಾಗಿ ಪೂರ್ಣಗೊಳಿಸಿಕೊಡುವುದಾಗಿ ಸಭೆಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ವಿಕಲ ಚೇತನರಿಗೆ ಶೇ.3% ಮೀಸಲಾತಿಯ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವ ಸಂಬಂಧ ಜಿಲ್ಲಾ ಪಂಚಾಯತಿಯಿಂದ ದಿನಾಂಕ 05-08-2014ರಂದೇ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದಿದ್ದಾಗ್ಯೂ ಸಹ ಈ ವರೆಗೆ ಕ್ರಿಯಾ ಯೋಜನೆ ಮಾಡಿಲ್ಲವೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಎಲ್ಲ ಮಾನ್ಯ ಸದಸ್ಯರುಗಳು ತುರ್ತಾಗಿ ಕಾಮಗಾರಿ ಪಟ್ಟಿ ನೀಡಬೇಕು ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಸದಸ್ಯ ಡಾ:ರವಿ ಯವರು, ತಾಲ್ಲೂಕುವಾರು/ ಸದಸ್ಯವಾರು ಹಣ ಹಂಚಿಕೆಯ ಕುರಿತು ಜಿಲ್ಲಾ ಪಂಚಾಯಿತಿಯಿಂದ ಪತ್ರ ನೀಡಿದಲ್ಲಿ ತಾವು ಪಟ್ಟಿ ಸಲ್ಲಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರಿದು, ಜಿಲ್ಲಾ ಪಂಚಾಯಿತಿಯಿಂದ ಸದರಿ ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ಎಲ್ಲ ಮಾನ್ಯ ಸದಸ್ಯರುಗಳಿಗೆ ಅದರ ಒಂದು ಪ್ರತಿಯನ್ನು ಒದಗಿಸುವಂತೆ ಕೋರಿದರು. ಮಾನ್ಯ ಅಧ್ಯಕ್ಷರು, ಅನುದಾನದ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಪತ್ರ ಬರೆದು ನಂತರ ಅವರ ಮೂಲಕ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಪತ್ರ ಕಳುಹಿಸಿ, ಲಭ್ಯವಿರುವ ಅನುದಾನಕ್ಕೆ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಸೇರಿ ನಾಳೆಯೇ ಕ್ರಿಯಾ ಯೋಜನೆ ತಯಾರಿಸಬೇಕು ಎಂದೂ ಸದರಿ ಕ್ರಿಯಾಯೋಜನೆಯನ್ನು ಮುಂದಿನ ಒಂದು ವಾರದೊಳಗಾಗಿ ಜಿಲ್ಲಾ ಪಂಚಾಯತ್ ಗೆ ಸಲ್ಲಿಸಬೇಕೆಂದೂ ನಂತರ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲವೆಂದೂ ಜಿಲ್ಲೆಯ ಎಲ್ಲ ಪಂ.ರಾ.ಇಂ.ಉಪವಿಭಾಗಗಳ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು, ಶೇ.3%ರಡಿ 2014-15 ನ್ನು ಹೊರತುಪಡಿಸಿ ಉಳಿದೆರಡು ವರ್ಷಗಳ ಅನುದಾನ ಸರ್ಕಾರಕ್ಕೆ ವಾಪಸ್ ಹೋಗಿದೆ ಎಂದು ತಿಳಿದು ಬಂದಿರುವುದಾಗಿ ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಯೋಜನಾಧಿಕಾರಿಯವರು, ಮಾತನಾಡಿ ದಿ: 31-12-2013 ರ ಜಿಲ್ಲಾ ಪಂಚಾಯತ್ ಸಾಮನ್ಯ ಸಭೆಯ ನಿರ್ಣಯದಂತೆ 2011-12, 2012-13 ಮತ್ತು 2013-14 ನೇ ಸಾಲುಗಳಲ್ಲಿ ಅನುಷ್ಠಾನಗೊಳಿಸಲಾದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಶೇ.3ರಷ್ಟು ಅನುದಾನವನ್ನು ಲೆಕ್ಕಾಹಾಕಲಾಗಿ ತುಮಕೂರು ಪಂ.ರಾ.ಇಂ.ವಿಭಾಗದ ವತಿಯಿಂದ ರೂ111.35 ಲಕ್ಷಗಳಿಗೆ ಮತ್ತು ಮಧುಗಿರಿ ಪಂ.ರಾ.ಇಂ. ವಿಭಾಗದಿಂದ ರೂ118.24 ಲಕ್ಷಗಳಿಗೆ

ವಿಕಲ ಚೇತನರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಈ ಬಾಬ್ತು ತುಮಕೂರು ವಿಭಾಗದಿಂದ ರೂ.35.90 ಲಕ್ಷಗಳನ್ನು, ಮಧುಗಿರಿ ವಿಭಾಗದಿಂದ ರೂ.101.29 ಲಕ್ಷ ಮೀಸಲಿರಿಸಿದ್ದು, ಈ ಸಂಬಂಧ ಲಭ್ಯವಿರುವ ಅನುದಾನವನ್ನು ಜಿಲ್ಲಾ ಪಂಚಾಯತ್ ಲೆಕ್ಕಶಾಖೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿಕೆ ಅನುದಾನವನ್ನು ಪ್ರಸಕ್ತ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಹೊಂದಾಣಿಕೆ ಮಾಡಿಕೊಂಡು ಅನುಷ್ಠಾನಗೊಳಿಸಬಹುದಾಗಿದೆ ಎಂದರು. ಈ ಸಂಬಂಧ ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ಹಾಲಿ ಜಿಲ್ಲಾ ಪಂಚಾಯತ್ ಖಾತೆಯಲ್ಲಿ ಒಟ್ಟು ರೂ.57.09 ಲಕ್ಷಗಳು ಜಮಾ ಇರುವುದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಕೂಡಲೇ ಕ್ರಿಯಾ ಯೋಜನೆ ಮಾಡಿ ಹಣ ಬಳಕೆ ಮಾಡದಿದ್ದಲ್ಲಿ ಮತ್ತೆ ಅನುದಾನ ವ್ಯಪಗತವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪೂರಕವಾಗಿ ಸದಸ್ಯರಾದ ಡಾ: ರವಿಯವರು, ಶೇ.3%ರ ಮೀಸಲಾತಿ ಅನುದಾನ ವ್ಯಪಗತವಾಗಿರುವುದರಿಂದ ಲೆಕ್ಕಶೀರ್ಷಿಕೆವಾರು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಪ್ರತಿ ತಾಲ್ಲೂಕಿಗೆ ನಿಗಧಿಯಾಗಿರುವ ಮೊತ್ತದಲ್ಲಿ ಕಡಿತ ಮಾಡಬೇಕಾಗುತ್ತದೆ, ಇಲ್ಲವಾದಲ್ಲಿ 2011-12 ಮತ್ತು 2012-13ನೇ ಸಾಲಿನದಕ್ಕೆ ಎಲ್ಲಿಂದ ಹಣ ತರುತ್ತಾರೆ ಎಂದು ತೀವ್ರವಾಗಿ ಆಕ್ಷೇಪಿಸಿದರಲ್ಲದೆ ಸದರಿ ಸಾಲುಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪಟ್ಟಿ ಸಲ್ಲಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತುತ ಲಭ್ಯವಿರುವ ಅನುದಾನವನ್ನು ಖರ್ಚುಮಾಡಿ, ಮುಂದೆ ಬರುವ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು; ಅಥವಾ ಪ್ರಸ್ತುತ ಲಭ್ಯವಿರುವ ಅನುದಾನಕ್ಕೆ ಕ್ರಿಯಾಯೋಜನೆ ಮಾಡಿದರೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು. ಪ್ರತಿಯಾಗಿ ಸದಸ್ಯರಾದ ಡಾ: ರವಿಯವರು, ಈ ರೀತಿ ಮಾಡುವುದರಿಂದ ಸಾಮಾನ್ಯ ಕಾರ್ಯಕ್ರಮಗಳಿಗೆ (General Programmes) ತೊಡಕಾಗುತ್ತದೆ (Suffer) ಯಾದ್ದರಿಂದ ಈ ರೀತಿ ಮಾಡುವ ಅವಶ್ಯಕತೆಯಿಲ್ಲ ಎಂದು ತಿಳಿಸಿ, ಕೊರತೆ ಸರಿದೂಗಿಸಲು ತಾಲ್ಲೂಕುವಾರು ವಿವಿಧ ಯೋಜನೆಗಳಡಿ ನಿಗಧಿಯಾದ ಅನುದಾನದಲ್ಲಿ ಶೇ.3%ರಷ್ಟು ಅನುದಾನವನ್ನು ಕಡಿತ ಮಾಡುತ್ತಾರೆ ಎಂದು ಸಭೆಯಲ್ಲಿ ಆಕ್ಷೇಪಿಸಿದರು. ಈ ಮಾತಿಗೆ ಸದಸ್ಯರಾದ ಶ್ರೀ ಚಂದ್ರು ಶೇಖರಬಾಬು ರವರು ಸಹಮತ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಎರಡು ವಿಭಾಗಗಳಿಂದ ನಿಗದಿತ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ಮಾರ್ಗಸೂಚಿ ಪ್ರಕಾರ ತಯಾರಿಸಿ ಒಂದುವಾರದೊಳಗ್ಗೆ ಸಲ್ಲಿಸುವಂತೆ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಳ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಸೂಚಿಸಿದರು.

**(ಕ್ರಮ: ಮು.ಯೋ.ಅ.,ಜಿ.ಪಂ.ತುಮಕೂರು/ ಕಾ.ಪಾ.ಇಂ.ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)**

ಅಂತಿಮವಾಗಿ, ದಿನಾಂಕ: 12-08-2014 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನ್ವಯ ಕೈಗೊಂಡ ಕ್ರಮದ ಬಗೆಗಿನ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸೂಚಿ 9 :- ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:-**

**1. ಅರಣ್ಯ ಹಕ್ಕುಗಳ ಮಾನ್ಯತೆ ಅಧಿನಿಯಮ 2012ರಡಿ ಜಿಲ್ಲಾ ಮಟ್ಟದ ಮತ್ತು ಉಪ ವಿಭಾಗ ಮಟ್ಟದ ಸಮಿತಿಗಳಿಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳನ್ನು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ಮೂಲಕ ನಾಮ ನಿರ್ದೇಶನ ಮಾಡುವ ಬಗ್ಗೆ :-**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 ಮತ್ತು 2008(ನಿಯಮಗಳ ತಿದ್ದುಪಡಿ 2012)ರ ರೂಪುರೇಷೆ, ಉದ್ದೇಶ ಇತ್ಯಾದಿಗಳ ಕುರಿತು ಸಭೆಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 ಮತ್ತು 2008(ನಿಯಮಗಳ ತಿದ್ದುಪಡಿ 2012)ರ ನಿರ್ದೇಶನದನ್ವಯ ಜಿಲ್ಲಾ ಪಂಚಾಯಿತಿಯಿಂದ ಸಾಮಾನ್ಯ ಸಭೆಯ ಮೂಲಕ ಈ ಕೆಳಕಂಡಂತೆ ಜಿಲ್ಲಾ ಸಮಿತಿಗೆ ಮೂರು ಜನ ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಹಾಗೂ ಉಪ ವಿಭಾಗ ಮಟ್ಟದ ಸಮಿತಿಗಳಿಗೆ ಪ್ರತಿ ಉಪವಿಭಾಗದಿಂದ ಮೂರು ಜನ ತಾಲ್ಲೂಕು ಪಂಚಾಯಿತಿ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಯಿತು;

**1. ಜಿಲ್ಲಾ ಮಟ್ಟದ ಸಮಿತಿ :-**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀ | ಜಾತಿ | ಕ್ಷೇತ್ರ | ತಾಲ್ಲೂಕು |
|---|---|---|---|---|
| 1 | ಅರುಣ್ ಕುಮಾರ್ | ನಾಯಕ | ಯಡೆಯೂರು | ಕುಣಿಗಲ್ |
| 2 | ಪುಟ್ಟಮಣಿ ಬೊಮ್ಮಣ್ಣ | ನಾಯಕ | ಬುಕ್ಕಾಪಟ್ಟಣ | ಶಿರಾ |
| 3 | ಲೋಹಿತಾ ಬಾಯಿ | ಲಂಬಾಣಿ | ಕಂದಿಕೆರೆ | ಚಿ.ನಾ.ಹಳ್ಳಿ |

**2. ಉಪ ವಿಭಾಗಮಟ್ಟದ ಸಮಿತಿ :-**

**ಎ. ತುಮಕೂರು ಉಪ ವಿಭಾಗ:-**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀ | ಕ್ಷೇತ್ರ | ತಾಲ್ಲೂಕು |
|---|---|---|---|
| 1 | ಪ್ರಸನ್ನಕುಮಾರ್ | ಕೆಸ್ತೂರು | ತುಮಕೂರು |
| 2 | ಹನುಮನಾಯಕ | ಹುತ್ರಿದುರ್ಗ | ಕುಣಿಗಲ್ |
| 3 | ರಾಧಮ್ಮ ಕೋಂ ಮೂರ್ತಿ | ಬಿದರೆ | ಗುಬ್ಬಿ |

ಬಿ. ಮಧುಗಿರಿ ಉಪವಿಭಾಗ :-

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀ | ಕ್ಷೇತ್ರ | ತಾಲ್ಲೂಕು |
|---|---|---|---|
| 1 | ಶ್ರೀರಂಗಪ್ಪ | ಬಡವನಹಳ್ಳಿ | ಮಧುಗಿರಿ |
| 2 | ಅನಿತಾ ಕೋಂ ಅಶ್ವತ್ಥ್ | ಹುಲಿಕುಂಟೆ | ಕೊರಟಗೆರೆ |
| 3 | ಶ್ರೀನಿವಾಸಪ್ಪ | ಲಕ್ಷ್ಮೀಸಾಗರ | ಶಿರಾ |
| 4 | ಮಾರಪ್ಪ | ಕಾಮನದುರ್ಗ | ಪಾವಗಡ |

ಸಿ. ತಿಪಟೂರು ಉಪವಿಭಾಗ :-

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀ | ಕ್ಷೇತ್ರ | ತಾಲ್ಲೂಕು |
|---|---|---|---|
| 1 | ಗೀತಾ.ವೈ | ಕಿಬ್ಬನಹಳ್ಳಿ | ತಿಪಟೂರು |
| 2 | ಡಿ.ಪಾರ್ವತಮ್ಮ ಕೋಂ ಬಸವರಾಜು | ಸಂಪಿಗೆ | ತುರುವೇಕೆರೆ |
| 3 | ಚಿಕ್ಕಮ್ಮ ಕೋಂ ಗಂಗಾಧರಯ್ಯ | ಅರಳಘಟ್ಟ | ಚಿ.ನಾ.ಹಳ್ಳಿ |

**2.** ಪಡಿತರ ಚೀಟಿ ವಿತರಣೆಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು, 6,40,000 ಕುಟುಂಬಗಳಿಗೆ 6,80,000 ಪಡಿತರ ಚೀಟಿಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಪಡಿತರ ಚೀಟಿಗಳನ್ನು ರದ್ದುಪಡಿಸುವ ಸಲುವಾಗಿ ಎಸ್.ಎಂ.ಎಸ್. ಕಳುಹಿಸಲು ತಿಳಿಸಲಾಗಿತ್ತು; ಆದರೆ ಎಸ್.ಎಂ.ಎಸ್. ಮಾಡಲು ಬಾರದವರು 1,20,000ಜನ ಅನಕ್ಷರಸ್ಥರಿರುವುದರಿಂದ ಎಸ್.ಎಂ.ಎಸ್.ಕಳುಹಿಸಲು ಸಾಧ್ಯವಾಗಿಲ್ಲ; ಈ ಸಂಬಂಧ ಈಗ ನ್ಯಾಯಬೆಲೆ ಅಂಗಡಿಗಳಲ್ಲಿ ಫಲಾನುಭವಿಗಳ ಪಟ್ಟಿ ಹಾಕಬೇಕು / ಹಾಕಿರುತ್ತಾರೆ; 1048 ನ್ಯಾಯಬೆಲೆ ಅಂಗಡಿಗಳಿದ್ದು, ಪ್ರತಿ ನ್ಯಾಯಬೆಲೆ ಅಂಗಡಿಗೆ ಒಬ್ಬರಂತೆ Fair Price Shop Officer ನೇಮಕ ಮಾಡಿದ್ದಾರೆ; ಸದರಿ Fair Price Shop Officer ಬಳಿ ಫಲಾನುಭವಿಗಳ ಪಟ್ಟಿ ಇರುತ್ತದೆ; ಆದುದರಿಂದ ಅವರ ಬಳಿ ಹೋಗುವಂತೆ ಜನರಿಗೆ ತಿಳಿಸಬೇಕು; ಸದರಿ ಅಧಿಕಾರಿಗಳ ಬಳಿ ಹೋಗಿ ಕೇಳಿದಲ್ಲಿ ಅಧಿಕಾರಿಗಳೇ ಎಸ್.ಎಂ.ಎಸ್.ಮಾಡುತ್ತಾರೆ ಎಂದು ಸಭೆಗೆ ತಿಳಿಸಿದರು.

**3.** ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ನಾಗರಿಕ ಸೌಲಭ್ಯ ಲೆಕ್ಕಶೀರ್ಷಿಕೆಯಡಿ ಎಲ್ಲಾ ಕಾಮಗಾರಿಗಳೂ ಅನುಮೋದನೆಗೊಂಡಿವೆ; ಆದರೆ 13ನೇ ಹಣಕಾಸು ಯೋಜನೆಯಡಿ 3-4 ಕಾಮಗಾರಿಗಳು ಅನುಮೋದನೆಯಾಗಿರುವುದಿಲ್ಲ ಎಂದು ಆಕ್ಷೇಪಿಸಿದರು. ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಚಿ.ನಾ.ಹಳ್ಳಿ ಇವರು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಮೋದಿತ ಕ್ರಿಯಾ ಯೋಜನೆಯ ಪ್ರಕಾರ 3-4 ಕಾಮಗಾರಿಗಳನ್ನು ಡಿಲೀಟ್ ಮಾಡಿ ಅನುಮೋದನೆ ನೀಡಿರುತ್ತಾರೆ, ಆ ಪ್ರಕಾರವಾಗಿ ಕೆಲಸ ನಿರ್ವಹಿಸಲಾಗಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಮಾನ್ಯ ಅಧ್ಯಕ್ಷರು, ಪಂ.ರಾ.ಇಂ.ವಿಭಾಗದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಮುಖ್ಯ ಯೋಜನಾಧಿಕಾರಿಯವರನ್ನು ಸಂಪರ್ಕಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ತಿಳಿಸಿದರು. ಮಾನ್ಯ ಸದಸ್ಯರಾದ

ಡಾ: ರವಿಯವರು, ಯಾವುದೇ ಒಂದು ಕಾಮಗಾರಿಗೆ ಮಂಜೂರಾತಿ ನೀಡಿದ ನಂತರ, ಆ ಕುರಿತು ಏನಾಗಿದೆ? ಹೇಗಾಗಿದೆ? ಏಕಾಗಿದೆ? ಎಂಬ ಬಗ್ಗೆ ಯೋಜನಾ ಶಾಖೆಯಿಂದಲೇ ಮಾಹಿತಿ ನೀಡಿದರೆ ಒಳಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

4. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ಇವರು, ತಮ್ಮ ವಿಭಾಗ ವ್ಯಾಪ್ತಿಯಲ್ಲಿ 576 ಕಾಮಗಾರಿಗಳ ಪೈಕಿ 37 ಕಾಮಗಾರಿಗಳು ಬಾಕಿ ಇದ್ದು, ಪೂರ್ಣಗೊಂಡ ಕಾಮಗಾರಿಗಳನ್ನು Third party inspection ಮಾಡಿಸಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಕಡತ ಸಲ್ಲಿಸಲಾಗಿದೆ; ಜಿಲ್ಲಾಧಿಕಾರಿಗಳಿಂದ ಕಡತ ವಾಪಸ್ ಬಂದ ನಂತರ PD account clear ಆಗಿ ಒಂದು ವಾರದಲ್ಲಿ ಎಲ್ಲ ಬಿಲ್ ಗಳನ್ನೂ ಪಾವತಿಸಲಾಗುವುದು ಎಂದು ಸಭೆಗೆ ತಿಳಿಸಿದರು.

5. ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು, ಪ್ರತಿ 2 ತಿಂಗಳಿಗೊಮ್ಮೆ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆ ನಡೆಯುತ್ತಿದ್ದು, ಸದರಿ ಸಾಮಾನ್ಯ ಸಭೆಗೆ ಮುನ್ನ ಐದು ವಿವಿಧ ದಿನಗಳಂದು ಸ್ಥಾಯಿ ಸಮಿತಿ ಸಭೆಗಳು ನಡೆಯುತ್ತಿವೆ; ಇದರಿಂದ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಇಡೀ ಐದು ದಿನ ಜಿಲ್ಲಾ ಪಂಚಾಯತ್ ಕಛೇರಿಗೆ ಹಾಜರಾಗುವುದರಿಂದ ಸಂಬಂಧಪಟ್ಟ ಇಲಾಖೆಗಳ ಕಾರ್ಯಕ್ರಮ ಪ್ರಗತಿಯನ್ನು ಉಸ್ತುವಾರಿ ಮಾಡಲು ಸಾಕಷ್ಟು ತೊಡಕಾಗುತ್ತಿದೆಯಾದ ಕಾರಣ ಇನ್ನು ಮುಂದೆ ಎಲ್ಲ ಐದು ಸ್ಥಾಯಿ ಸಮಿತಿ ಸಭೆಗಳನ್ನು ಒಂದೇ ದಿನದಂದು ನಡೆಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಆದರಂತೆ, ಎಲ್ಲ ಐದು ಸ್ಥಾಯಿ ಸಮಿತಿಗಳ ಸಭೆಯನ್ನು ಒಂದೇ ದಿನದಂದು ನಡೆಸಲು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಿತು.

6. ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಕುರಿತು, ಸಮಗ್ರ ಚರ್ಚೆಯ ನಂತರ ಸ್ವಲ್ಪ ಮಟ್ಟಿಗೆ ಮರುಪರಿಶೀಲಿಸಿ ಅನುಮೋದನೆ ನೀಡುವಂತೆ ಸಭೆಯು ಸರ್ವಾನುಮತದ ಒಪ್ಪಿಗೆ ನೀಡಿತು.

7. ಕಂದಾಯೇತರ ಗ್ರಾಮಗಳಾದ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ ಮತ್ತು ವಡ್ಡರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವಂತೆ ಸರ್ಕಾರವನ್ನು ಕೋರಲು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತು.

(ಕ್ರಮ : ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು)

ಚರ್ಚಿಸತಕ್ಕ ವಿಷಯಗಳು ಮುಕ್ತಾಯಗೊಂಡಿದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸ ಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು.